ಸಂಪುಟ 01 | ಸಂಚಿಕೆ 178 ಬುಧವಾರ 02 ಸೆಪ್ಟೆಂಬರ್ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

MA ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ
NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ
REGIONAL KANNADA DAILY MORNING

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ, ಗದಗ, ವಿಜಯನಗರ, ಏಕಕಾಲಕ್ಕೆ ಪ್ರಕಟಣೆ

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

1)ವಿಶ್ವ ತೆಂಗಿನಕಾಯಿ ದಿನ (World Coconut Day)
ತೆಂಗಿನಕಾಯಿಯ ಕೃಷಿ, ಆರ್ಥಿಕ ಮಹತ್ವ ಮತ್ತು ವಿವಿಧ ಬಳಕೆಗಳ ಕುರಿತು ಜಾಗೃತಿ ಮೂಡಿಸುವ ದಿನ.

2)ವಿಜಯ ದಿನ ವಿಯೆಟ್ನಾಂ (National Day of Vietnam) ವಿಯೆಟ್ನಾಂನ ರಾಷ್ಟ್ರೀಯ ದಿನದ ಆಚರಣೆಯ ಭಾಗವಾಗಿ ಸೆಪ್ಟೆಂಬರ್ 2 ಪ್ರಮುಖ ದಿನವಾಗಿದೆ.

## ಸುಭಾಷಿತ

ಸೋಲು ಎಂಬ ರೋಗವನ್ನು ನಾಶ ಮಾಡಲು, ಆತ್ಮವಿಶ್ವಾಸ ಮತ್ತು ಕಠಿಣ ಪರಿಶ್ರಮವೇ ಉತ್ತಮವಾದ ಮದ್ದು.

–ಎ.ಪಿ.ಜೆ. ಅಬ್ದುಲ್ ಕಲಾಂ

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಕೆಪಿಎಸ್‌ಸಿ ಅಕ್ರಮ 6 ಅಭ್ಯರ್ಥಿಗಳ ತಪ್ಪೊಪ್ಪಿಗೆ..!

ನೈಜ್ಯ ದೆಸೆ ನ್ಯೂಸ್

ಬೆಂಗಳೂರು:ಕರ್ನಾಟಕ ಲೋಕಸೇವಾ ಆಯೋಗದ ಪಶುವೈದ್ಯಾಧಿಕಾರಿ ನೇಮಕಾತಿ ಪರೀಕ್ಷಾ ಅಕ್ರಮ ಪ್ರಕರಣದ ತನಿಖೆ ತೀವ್ರ ಗೊಂಡಿದ್ದು, ಸಿಐಡಿ ಅಧಿಕಾರಿಗಳ ಮುಂದೆ ಮಹತ್ವದ ಬೆಳವಣಿಗೆಗಳು ಜರುಗಿವೆ. ಸುಮಾರು 400 ಹುದ್ದೆಗಳಿಗೆ ನಡೆದಿದ್ದ ಈ ನೇಮಕಾತಿ ಪ್ರಕ್ರಿಯೆಯಲ್ಲಿ ಬ್ರಹಾಂಡ ಭ್ರಷ್ಟಾಚಾರ ನಡೆದಿರುವುದು ತನಿಖೆಯಿಂದ ದೃಢಪಟ್ಟಿದೆ. ಪ್ರತಿ ಹುದ್ದೆಗೆ ಬರೋಬ್ಬರಿ 40 ಲಕ್ಷ ರೂಪಾಯಿಗಳಿಗೆ ಹಣಕಾಸಿನ ಒಪ್ಪಂದ (ಡೀಲ್) ಕುದುರಿಸಲಾಗಿತ್ತು. ಮಹಮದ್ ಸುಹೇಲ್ ಸೇರಿದಂತೆ ಒಟ್ಟು 6 ಜನ ಅಭ್ಯರ್ಥಿಗಳು ಹಣ ನೀಡಿ ಅಕ್ರಮವಾಗಿ ಪರೀಕ್ಷೆ ಬರೆದಿರುವುದಾಗಿ ಸಿಐಡಿ ವಿಚಾರಣೆ ವೇಳೆ ತಮ ತಪ್ಪನ್ನು ಒಪ್ಪಿಕೊಂಡಿದ್ದಾರೆ.

**ಮುಂಗಡ ಹಣ ಪಾವತಿ :** ಬೆಂಗಳೂರಿನ ರಾಜಾಜಿನಗರದ ಕಚೇರಿಯೊಂದರಲ್ಲಿ ವಾಟ್ಸಾಪ್ ಮೂಲಕ ವ್ಯವಹಾರ ನಡೆಸಿ, ಕಿಂಗ್‌ಪಿನ್‌ಗಳಿಗೆ ಮುಂಗಡವಾಗಿ 20 ಲಕ್ಷ ರೂ.ಗಳನ್ನು ಪಾವತಿಸಿರುವುದಾಗಿ ಸುಹೇಲ್ ಬಾಯಿಬಿಟ್ಟಿದ್ದಾನೆ.

**ರಹಸ್ಯ ಪರೀಕ್ಷಾ ಕೇಂದ್ರಗಳು :** ಸಾಮಾನ್ಯ ಕೇಂದ್ರಗಳ ಬದಲಿಗೆ ಬೆಂಗಳೂರಿನ ರೆಸಾರ್ಟ್, ತುಮಕೂರಿನ ದೇವರಾಯನದುರ್ಗ ಹಾಗೂ ಆಂಧ್ರಪ್ರದೇಶದ ರೆಸಾರ್ಟ್‌ಗಳಲ್ಲಿ ಅಭ್ಯರ್ಥಿಗಳಿಗೆ ವಾಸ್ತವ್ಯ ಕಲ್ಪಿಸಿ, ಪರೀಕ್ಷೆಗೂ ಮುನ್ನವೇ ಪ್ರಶ್ನೆಪತ್ರಿಕೆ ನೀಡಿ ರಹಸ್ಯ ತರಬೇತಿ ನೀಡಲಾಗಿತ್ತು.

**ಪ್ರಭಾವಿ ಮುಖಂಡನ ಮನೆ ಜಪ್ತಿ :** ಈ ಅಕ್ರಮ ಜಾಲದ ಪ್ರಮುಖ ಮಧ್ಯವರ್ತಿಯಾಗಿರುವ ಭಾಲ್ಕಿ ಮೂಲದ ಬಿಜೆಪಿ ಮುಖಂಡ ಬಸವರಾಜ್ ಕನ್ನಾಳೆ ಎಂಬಾತನನ್ನು ಸಿಐಡಿ ಈಗಾಗಲೇ ಬಂಧಿಸಿದೆ. ಕೋರ್ಟ್‌ನಿಂದ ಸರ್ಚ್ ವಾರೆಂಟ್ ಪಡೆದ ಸಿಐಡಿ ಅಧಿಕಾರಿಗಳು, ಸಂಜಯ್ ನಗರದ ವಿನಾಯಕ ಲೇಔಟ್‌ನಲ್ಲಿರುವ ಬಸವರಾಜ್ ಕನ್ನಾಳೆ ಮನೆಯಲ್ಲಿ ಶೋಧ ನಡೆಸಿ, ಸಿಸಿಟಿವಿ ಡಿವಿಆರ್ ವಶಕ್ಕೆ ಪಡೆದಿದ್ದಾರೆ.

ತನಿಖೆ ಮುಂದುವರಿದ ಹಿನ್ನೆಲೆಯಲ್ಲಿ ಆತನ ಮನೆಯನ್ನು ಸೀಜ್ ಮಾಡಿ ತಮ ನಿಯಂತ್ರಣಕ್ಕೆ ತೆಗೆದುಕೊಂಡಿದ್ದಾರೆ.ಈ ಅಕ್ರಮ ದಂಧೆಯ ಹಿಂದೆ ದೊಡ್ಡ ಜಾಲವೇ ಕಾರ್ಯ ನಿರ್ವಹಿಸುತ್ತಿದ್ದು, ಸಿಐಡಿ



ಅಧಿಕಾರಿಗಳು ತಪ್ಪೊಪ್ಪಿಗೆ ಹೇಳಿಕೆಗಳನ್ನು ಅಧಿಕೃತವಾಗಿ ದಾಖಲಿಸಿಕೊಂಡು ತಲೆಮರೆಸಿಕೊಂಡಿರುವ ಇತರ ಕಿಂಗ್‌ಪಿನ್‌ಗಳು ಹಾಗೂ ಪ್ರಭಾವಿಗಳಿಗಾಗಿ ತೀವ್ರ ಶೋಧ ಮುಂದುವರಿಸಿದ್ದಾರೆ.

**ಆರು ಅಭ್ಯರ್ಥಿಗಳ ಮೇಲೂ ತನಿಖೆಯ ಕಣ್ಣು :** ಈ ಪ್ರಕರಣದಲ್ಲಿ ಸುಮಾರು ಆರು ಅಭ್ಯರ್ಥಿಗಳು ತನಿಖಾ ಸಂಸ್ಥೆಗಳ ಮುಂದೆ ತಪ್ಪೊಪ್ಪಿಗೆ ನೀಡಲು ಮುಂದಾಗಿದ್ದಾರೆ ಎಂಬ ಮಾಹಿತಿ ಆಗಸ್ಟ್‌ನಲ್ಲೇ ಹೊರಬಂದಿತ್ತು. ಅಭ್ಯರ್ಥಿಗಳ ನಿವಾಸಗಳ ಮೇಲಿನ ಶೋಧ ಮತ್ತು ವಿಚಾರಣೆಯ ಸಂದರ್ಭದಲ್ಲಿ ಅಕ್ರಮದ ಕುರಿತು ಮಹತ್ವದ ಮಾಹಿತಿ ಲಭ್ಯವಾಗಿದೆ ಎಂದು ವರದಿಯಾಗಿತ್ತು. ಆದರೆ ಎಲ್ಲ ಆರು ಅಭ್ಯರ್ಥಿಗಳೂ ಈಗಾಗಲೇ ಸಿಐಡಿ ಮುಂದೆ ಅಧಿಕೃತವಾಗಿ ತಪ್ಪೊಪ್ಪಿಕೊಂಡಿದ್ದಾರೆ ಎಂದು ಅಂತಿಮವಾಗಿ ಹೇಳಲು ತನಿಖಾ ಸಂಸ್ಥೆಗಳ ಅಧಿಕೃತ ದಾಖಲೆಗಳು ಬಹಿರಂಗವಾಗುವವರೆಗೆ ಎಚ್ಚರಿಕೆ ಅಗತ್ಯ. ಪ್ರಸ್ತುತ ಲಭ್ಯವಿರುವ ವರದಿಗಳಲ್ಲಿ ಮಹಮದ್ ಸುಹೇಲ್ ಅವರ ಹೇಳಿಕೆ ಸ್ಪಷ್ಟವಾಗಿ ವರದಿಯಾಗಿದೆ.

**ಕನ್ನಾಳೆ ಬಂಧನದ ಬಳಿಕ ತನಿಖೆಗೆ ಮತ್ತಷ್ಟು ವೇಗ :** ಪ್ರಕರಣದಲ್ಲಿ ಪ್ರಮುಖ ತಿರುವು ತಂದ ಮತ್ತೊಂದು ಬೆಳವಣಿಗೆ ಎಂದರೆ ಭಾಲ್ಕಿ ಮೂಲದ ಬಸವರಾಜ್ ಕನ್ನಾಳೆ ಬಂಧನ. ಪಶುವೈದ್ಯಾಧಿಕಾರಿ ನೇಮಕಾತಿ ಅಕ್ರಮದಲ್ಲಿ ಮಧ್ಯವರ್ತಿಯಾಗಿ ಶಂಕಿಸಲ್ಪಟ್ಟಿರುವ ಕನ್ನಾಳೆಯನ್ನು ಸಿಐಡಿ ದೆಹಲಿ ವಿಮಾನ ನಿಲ್ದಾಣದಲ್ಲಿ ವಶಕ್ಕೆ ಪಡೆದಿತ್ತು. ಅವರು ದೇಶದಿಂದ ಹೊರಹೋಗಲು ಪ್ರಯತ್ನಿಸುತ್ತಿದ್ದರು ಎಂಬ ಮಾಹಿತಿಯೂ ತನಿಖೆಯ ಸಂದರ್ಭದಲ್ಲಿ ನ್ಯಾಯಾಲಯಕ್ಕೆ ತಿಳಿಸಲಾಗಿದೆ. ಕನ್ನಾಳೆ ಅವರು ತುಮಕೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯರಾಗಿದ್ದು, ವಿವಿಧ ವ್ಯವಹಾರಗಳೊಂದಿಗೆ ಸಂಪರ್ಕ ಹೊಂದಿದ್ದಾರೆ ಎಂದು ವರದಿಯಾಗಿದೆ. ಅವರಿಗೂ ಪ್ರಕರಣದಲ್ಲಿ ಬಂಧಿತರಾಗಿರುವ ಐಎಎಸ್ ಅಧಿಕಾರಿ ಗ್ಯಾನೇಂದ್ರ ಕುಮಾರ್ ಗಂಗ್ವಾರ್ ಅವರಿಗೂ ಸಂಪರ್ಕವಿತ್ತು ಎಂಬ ಅನುಮಾನವನ್ನು ಸಿಐಡಿ ತನಿಖೆ ನಡೆಸುತ್ತಿದೆ. ಕನ್ನಾಳೆ ಬಂಧನದ ಬೆನ್ನಲ್ಲೇ ಬೆಂಗಳೂರಿನ ಸಂಜಯನಗರದಲ್ಲಿರುವ ಅವರ ನಿವಾಸದ ಮೇಲೂ ಸಿಐಡಿ ಶೋಧ ನಡೆಸಿದೆ. ನ್ಯಾಯಾಲಯದಿಂದ ಸರ್ಚ್ ವಾರಂಟ್ ಪಡೆದು ಮನೆ ಪರಿಶೀಲನೆ ನಡೆಸಿದ ಅಧಿಕಾರಿಗಳು ಕೆಲವು ದಾಖಲೆಗಳು ಮತ್ತು ಇತರ ಸಾಕ್ಷ್ಯಗಳನ್ನು ವಶಪಡಿಸಿಕೊಂಡಿರುವುದಾಗಿ ವರದಿಯಾಗಿದೆ. ಅಭ್ಯರ್ಥಿಗಳೊಂದಿಗೆ ನಡೆದಿರಬಹುದಾದ ಮಾತುಕತೆಗಳಿಗೆ ಸಂಬಂಧಿಸಿದ ಸುಳಿವುಗಳ ಹಿನ್ನೆಲೆಯಲ್ಲಿ ಮನೆಯ ಸಿಸಿಟಿವಿ ಡಿವಿಆರ್ ಕೂಡ ಸಿಐಡಿ ವಶಕ್ಕೆ ಪಡೆದಿದೆ ಎನ್ನಲಾಗಿದೆ. ಶೋಧದ ಬಳಿಕ ಮನೆಯನ್ನು ಸೀಜ್ ಮಾಡಿ ತನಿಖಾ ಸಂಸ್ಥೆಯ ನಿಯಂತ್ರಣಕ್ಕೆ ತೆಗೆದುಕೊಳ್ಳಲಾಗಿದೆ ಎಂದು ವರದಿಯಾಗಿದೆ.

**ಪ್ರಕರಣಕ್ಕೆ ಹೊಸ ಆಯಾಮ :** ಇದಕ್ಕೂ ಮುನ್ನ ಕೆಪಿಎಸ್‌ಸಿಯಲ್ಲಿ ಪರೀಕ್ಷಾ ನಿಯಂತ್ರಕರಾಗಿ ಕಾರ್ಯನಿರ್ವಹಿಸಿದ್ದ ಐಎಎಸ್ ಅಧಿಕಾರಿ ಗ್ಯಾನೇಂದ್ರ ಕುಮಾರ್ ಗಂಗ್ವಾರ್ ಅವರನ್ನು ಸಿಐಡಿ ಬಂಧಿಸಿತ್ತು. ಅವರು 2024ರಿಂದ ಮಾರ್ಚ್ 2026ರವರೆಗೆ ಪರೀಕ್ಷೆಗಳ ನಿಯಂತ್ರಕರಾಗಿ ಕಾರ್ಯನಿರ್ವಹಿಸಿದ್ದರು ಎಂದು ವರದಿಯಾಗಿದೆ. ಸತತ ವಿಚಾರಣೆಯ ಬಳಿಕ ಸಮರ್ಪಕ ಉತ್ತರ ನೀಡದ ಹಿನ್ನೆಲೆಯಲ್ಲಿ ಅವರನ್ನು ಬಂಧಿಸಲಾಗಿದೆ ಎಂದು ತನಿಖಾ ಸಂಸ್ಥೆ ತಿಳಿಸಿರುವುದಾಗಿ ವರದಿಯಾಗಿದೆ.

ಬಳಿಕ ನ್ಯಾಯಾಲಯ ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿತ್ತು.ಈ ಪ್ರಕರಣದ ಆರಂಭಿಕ ಹಂತದಲ್ಲಿ ಪಶುವೈದ್ಯಾಧಿಕಾರಿ ಹುದ್ದೆಗಾಗಿ 80 ಲಕ್ಷದವರೆಗೆ ಹಣ ಕೇಳಲಾಗಿತ್ತು ಎಂಬ ಆರೋಪಗಳು ಕೇಳಿಬಂದಿದ್ದವು. ಕೆಲವು ಅಭ್ಯರ್ಥಿಗಳು ಆಡಿಯೋ, ವಿಡಿಯೋ ಮತ್ತು ಇತರ ದಾಖಲೆಗಳನ್ನು ಬಿಡುಗಡೆ ಮಾಡಿ ನೇಮಕಾತಿ ಪ್ರಕ್ರಿಯೆಯಲ್ಲಿ ಮಧ್ಯವರ್ತಿಗಳ ಹಸ್ತಕ್ಷೇಪದ ಆರೋಪ ಮಾಡಿದ್ದರು. 2026ರ ಜನವರಿ 8ರಂದು ಪರೀಕ್ಷೆ ನಡೆದಿದ್ದು, ಸುಮಾರು 400 ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆ ನಡೆದಿತ್ತು. ಜುಲೈ 17ರಂದು ಅಂತಿಮ ಆಯ್ಕೆ ಪಟ್ಟಿ ಪ್ರಕಟವಾದ ಬಳಿಕ ಅಕ್ರಮದ ಆರೋಪಗಳು ತೀವ್ರಗೊಂಡವು. ಪ್ರಕರಣಕ್ಕೆ ಸಂಬಂಧಿಸಿದ ಎರಡು ಎಫ್‌ಐಆರ್‌ಗಳನ್ನು ಜುಲೈನಲ್ಲಿ ರಾಜ್ಯ ಸರ್ಕಾರ ಸಿಐಡಿಗೆ ವರ್ಗಾಯಿಸಿತ್ತು. ಆರಂಭಿಕ ಪ್ರಕರಣದಲ್ಲಿ ಒಂದು ಹುದ್ದೆಗೆ 80 ಲಕ್ಷ ರೂ. ಬೇಡಿಕೆ ಇಟ್ಟಿರುವ ಆರೋಪವೂ ದಾಖಲಾಗಿತ್ತು.

**ಇ.ಡಿ ದಾಳಿ, ದಾಖಲೆಗಳ ಪರಿಶೀಲನೆ :** ಪ್ರಕರಣದ ಹಣಕಾಸು ವ್ಯವಹಾರಗಳ ಆಯಾಮವನ್ನು ಪರಿಶೀಲಿಸುತ್ತಿರುವ ಜಾರಿ ನಿರ್ದೇಶನಾಲಯ ಆಗಸ್ಟ್‌ನಲ್ಲಿ ಕರ್ನಾಟಕ ಮತ್ತು ಅಹಮದಾಬಾದ್ ಸೇರಿದಂತೆ ಒಟ್ಟು 21 ಸ್ಥಳಗಳಲ್ಲಿ ಶೋಧ ನಡೆಸಿತ್ತು. ಕಚೇರಿ, ಅಮಾನತುಗೊಂಡಿದ್ದ ಅಧ್ಯಕ್ಷ ಶಿವಶಂಕರಪ್ಪ ಸಾಹುಕಾರ್ ಅವರ ನಿವಾಸ, ಸದಸ್ಯರು, ಕೆಲವು ಆಯ್ಕೆಯಾದ ಅಭ್ಯರ್ಥಿಗಳು ಹಾಗೂ ಪರೀಕ್ಷೆಯ ಡಿಜಿಟಲ್ ಮೌಲ್ಯಮಾಪನಕ್ಕೆ ಸಂಬಂಧಿಸಿದ ಸಂಸ್ಥೆಗಳ ಸ್ಥಳಗಳಲ್ಲೂ ಶೋಧ ನಡೆದಿತ್ತು.

## ಮುಧೋಳ ಪೊಲೀಸ್ ಠಾಣೆಯಲ್ಲಿ ಬೀಳ್ಕೊಡುಗೆ ಮತ್ತು ಸ್ವಾಗತ ಸಮಾರಂಭನೂತನ ಪಿ.ಎಸ್.ಐ ಅಧಿಕಾರ ಸ್ವೀಕಾರ

ನೈಜ್ಯ ದೆಸೆ ನ್ಯೂಸ್

ಮುಧೋಳ 30 ನೇ ಅಗಸ್ಟ 2026 ಇಲ್ಲಿನ ಮುಧೋಳ ಪೊಲೀಸ್ ಠಾಣೆಯ ಆವರಣದಲ್ಲಿ ಭಾನುವಾರ ಸಂಜೆ, ಪಿ.ಎಸ್.ಐ ಅಜೀತಕುಮಾರ ಹೊಸಮನಿ ಅವರ ಬೀಳ್ಕೊಡುಗೆ ಹಾಗೂ ನೂತನ ಪಿ.ಎಸ್.ಐ ಶಿವಾನಂದ ಕಾರಜೋಳ ಅವರ ಸ್ವಾಗತ ಸಮಾರಂಭವು ಅದ್ದೂರಿಯಾಗಿ ನಡೆಯಿತು.

ಬಾಗಲಕೋಟೆ ಜಿಲ್ಲೆಯ ಮುಧೋಳ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ ಆಗಿ ಸೇವೆ ಸಲ್ಲಿಸಿ, ವರ್ಗಾವಣೆಯಾದ ಅಜೀತಕುಮಾರ ಹೊಸಮನಿ ಅವರಿಗೆ ಠಾಣೆಯ ಸಿಬ್ಬಂದಿ ಹಾಗೂ ಗಣ್ಯರು ಆತ್ಮೀಯವಾಗಿ ಬೀಳ್ಕೊಟ್ಟರು. ಸಮಾರಂಭದಲ್ಲಿ ಹೊಸಮನಿ ಅವರ ದಕ್ಷ ಸೇವೆ ಹಾಗೂ ಕರ್ತವ್ಯ ನಿಷ್ಠೆಯನ್ನು ಸ್ಮರಿಸಲಾಯಿತು. ಅದೇ ಸಂದರ್ಭದಲ್ಲಿ, ಮುಧೋಳ ಪೊಲೀಸ್ ಠಾಣೆಯ ನೂತನ ಪಿ.ಎಸ್.ಐ ಆಗಿ ಅಧಿಕಾರ ವಹಿಸಿಕೊಂಡ ಶಿವಾನಂದ




ಕಾರಜೋಳ ಅವರನ್ನು ಹೂಗುಚ್ಛ ನೀಡುವ ಮೂಲಕ ಆತ್ಮೀಯವಾಗಿ ಸ್ವಾಗತಿಸಲಾಯಿತು.

ನೂತನ ಪಿ.ಎಸ್.ಐ ಅವರು ಅಧಿಕಾರ ಸ್ವೀಕರಿಸಿದ ಬಳಿಕ, ಠಾಣೆಯ ವ್ಯಾಪ್ತಿಯಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡಲು ತಾವು ಬದ್ಧರಾಗಿರುವುದಾಗಿ ಭರವಸೆ ನೀಡಿದರು. ಈ ಸಮಾರಂಭವು ಭಾನುವಾರ, ಆಗಸ್ಟ್ 30, 2026 ರಂದು ಸಂಜೆ 5.00 ಗಂಟೆಗೆ ಮುಧೋಳ ಪೊಲೀಸ್ ಠಾಣೆಯ ಆವರಣದಲ್ಲಿ ಜರುಗಿತು. ಕಾರ್ಯಕ್ರಮದಲ್ಲಿ ಇಲಾಖೆಯ ಹಿರಿಯ ಅಧಿಕಾರಿಗಳು, ಪೊಲೀಸ್ ಸಿಬ್ಬಂದಿ ಮತ್ತು ಇತರ ಗಣ್ಯರು ಉಪಸ್ಥಿತರಿದ್ದರು.

## ಸಿಂಧನೂರಿನ ಎರಡು ಕಾಲೇಜುಗಳಲ್ಲಿ ಸೀರತ್ ಉಪನ್ಯಾಸ ಕಾರ್ಯಕ್ರಮ ಯಶಸ್ವಿ

ನೈಜ್ಯ ದೆಸೆ ನ್ಯೂಸ್

ಸಿಂಧನೂರು:"ಕ್ರಾಂತಿಯ ಜ್ಯೋತಿ ಪ್ರವಾದಿ ಮುಹಮ್ಮದ್ (ಸ) ರಾಜ್ಯವ್ಯಾಪಿ ಅಭಿಯಾನ 2026" ಅಂಗವಾಗಿ ಇಂದು ಸಿಂಧನೂರಿನ ಅನಿಕೇತನ ಪದವಿ ಪೂರ್ವ ಕಾಲೇಜು ಹಾಗೂ SSV Private ITI ಕಾಲೇಜಿನಲ್ಲಿ ಸೀರತ್ ಉಪನ್ಯಾಸ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಆಯೋಜಿಸಲಾಯಿತು.

ಅನಿಕೇತನ ಕಾಲೇಜಿನಲ್ಲಿ ನಿವೃತ್ತ ಶಿಕ್ಷಕರಾದ ಹುಸೈನ್ ಭಾಷಾ ಅವರು ಮುಖ್ಯ ಭಾಷಣಕಾರರಾಗಿ ಪ್ರವಾದಿ ಮುಹಮ್ಮದ್ (ಸ) ಅವರ ಜೀವನ, ಬೋಧನೆಗಳು ಹಾಗೂ ಶಿಕ್ಷಣ ಕ್ಷೇತ್ರಕ್ಕೆ ಅವರ ಮಾರ್ಗದರ್ಶನದ ಕುರಿತು ಮಾತನಾಡಿದರು. ತಿಮ್ಮಣ್ಣ ನಾಯಕ್ (ಪ್ರಾಂಶುಪಾಲರು), ಶಫಿಯುಲ್ಲಾ ಖಾನ್ (ಜಿಲ್ಲಾ KDP ಸದಸ್ಯ), ಅಬುಲೈಸ್ ನಾಯಕ್ (ಅಧ್ಯಕ್ಷರು, SYM), ನೂರುದ್ದೀನ್ (ಅಧ್ಯಕ್ಷರು, AIITA) ಹಾಗೂ ಅಫ್ಜಲ್ ಹುಸೈನ್ (ಅಧ್ಯಕ್ಷರು, ಖಖಔ ಸಿಂಧನೂರು) ಉಪಸ್ಥಿತರಿದ್ದರು. ಖಖಗಿ ಕಡಿತಚಿಣಜ ITI ಕಾಲೇಜಿನಲ್ಲಿ ಪಂಪಯ್ಯ ಸ್ವಾಮಿ ಸಾಲಿಮಠ ಅವರು ಮುಖ್ಯ ಭಾಷಣಕಾರರಾಗಿ ಪ್ರವಾದಿ ಮುಹಮ್ಮದ್ (ಸ) ಅವರ ಜೀವನ, ಬೋಧನೆಗಳು ಹಾಗೂ ಮಾನವಕುಲಕ್ಕೆ ಅವರ ಸಂದೇಶದ ಕುರಿತು ಮಾತನಾಡಿದರು. ಇಮ್ತಿಯಾಜ್ (ಜಿಲ್ಲಾಧ್ಯಕ್ಷರು, SIO), ಇಮಾಮ್







ಹುಸೈನ್ (ಪ್ರಾಂಶುಪಾಲರು), ಚಾಂದ್ ಪಾಷಾ ಜಾಗೀರ್ದಾರ್ ಹಾಗೂ ಸುಹೈಲ್ ಉಪಸ್ಥಿತರಿದ್ದರು. ಎರಡೂ ಕಾರ್ಯಕ್ರಮಗಳಲ್ಲಿ ಮುಖ್ಯ ಭಾಷಣಕಾರರು ಅತ್ಯುತ್ತಮ ರೀತಿಯಲ್ಲಿ ತಮ್ಮ ವಿಚಾರಗಳನ್ನು ಮಂಡಿಸಿ, ವಿದ್ಯಾರ್ಥಿಗಳಿಗೆ ಪ್ರವಾದಿ ಮುಹಮ್ಮದ್ (ಸ) ಅವರ ಸೀರತ್, ಜೀವನ ಮತ್ತು ಬೋಧನೆಗಳ ಕುರಿತು ಮಹತ್ವದ ಮಾಹಿತಿಯನ್ನು ನೀಡಿದರು. ವಿದ್ಯಾರ್ಥಿಗಳು, ಉಪನ್ಯಾಸಕರು ಹಾಗೂ ಅತಿಥಿಗಳಿಗಾಗಿ ಜಮಾಅತೆ ಇಸ್ಲಾಮಿ ಹಿಂದ್ ವತಿಯಿಂದ ಉಪಹಾರದ ವ್ಯವಸ್ಥೆ ಮಾಡಲಾಗಿತ್ತು.

## ಅದ್ದೂರಿಯಾಗಿ ಜರುಗಿದ ವೀರಭದ್ರೇಶ್ವರ ಗಂಗಾಸ್ಥಳ ಕಾರ್ಯಕ್ರಮ, ಮೈಮನ ರೊಮಾಂಚನಗೊಳಿಸಿದ ಪುರವಂತಿಕೆ ಸೇವೆ

ನೈಜ್ಯ ದೆಸೆ ನ್ಯೂಸ್

ಕವಿತಾಳ: ಪ್ರತಿ ಎರಡು ವರ್ಷಕ್ಕೊಮ್ಮೆ ಶ್ರಾವಣ ಮಾಸದ ಮೂರನೇ ಮಂಗಳವಾರ ನಡೆಯುವ ಪಟ್ಟಣದ ಶ್ರೀ ವೀರಭದ್ರೇಶ್ವರ ದೇವರ ಗಂಗಾಸ್ಥಳ ಕಾರ್ಯಕ್ರಮವು ಅತ್ಯಂದ ಸಂಭ್ರಮ ಸಡಗರದಿಂದ ಅದ್ದೂರಿಯಾಗಿ ಜರುಗಿತು.

ಬೆಳಿಗ್ಗೆ ದೇವರಿಗೆ ಮಹಾರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆ ಸೆರಿದಂತೆ ವಿವಿದ ಧಾರ್ಮಿಕ ವಿಧಿವಿಧಾನಗಳನ್ನು ಶ್ರೀ ಕಲ್ಮಠದ ಅಭಿನವ ಸಿದ್ದಲಿಂಗ ಮಹಾಸ್ವಾಮಿಗಳ ಸಾನಿದ್ಯದಲ್ಲಿ ಅರ್ಚಕರು ನೆರವೇರಿಸಿದರು, ನಂತರ ಶ್ರೀ ಶ್ರೀಶೈಲಪ್ಪ ತಾತನವರ ನೇತೃತ್ವದಲ್ಲಿ ನಡೆದ ಪುರವಂತಿಕೆ ಸೇವೆ ಜನರ ಮೈಮನ ರೋಮಾಂಚನಗೊಳ್ಳುವಂತೆ ಮಾಡಿತು. ದೇವಸ್ಥಾನದಿಂದ ಆರಂಭವಾದ ಪಲ್ಲಕ್ಕಿ, ನಂದಿಕೋಲು ಮೇರವಣಿಗೆಯು ಕಳಸ ಕುಂಭದೊಂದಿಗೆ ಸಿಹಿ ನೀರಿನ



ಭಾವಿಗೆ ತೆರಳಿ ಪೂಜೆ ಸಲ್ಲಿಸಿ ಹೊಳೆಯ ನೀರನ್ನು ತಂದು ದೇವರಿಗೆ ಪಾದಕ್ಕೆ ಅರ್ಪಿಸಲಾಯಿತು ಮಾಡಲಾಯಿತು. ಮಹಿಳೆಯರು ಕಳಸ ಕುಂಭದೊಂದಿಗೆ ಭಾಗವಹಿಸುವ ಮೂಲಕ ಮೆರವಣಿಗೆಗೆ ಮೇರಗು ತಂದರು. ನಂತರ ಭಕ್ತರಿಗೆ ಮಹಾ ಪ್ರಸಾದ ವ್ಯವಸ್ಥೆಯನ್ನು ಮಾಡಲಾಗಿತ್ತು .

## ಮದ್ಯಮುಕ್ತ ಗ್ರಾಮಗಳ ಸ್ಥಿರತೆಗೆ ಸಂಯಮ ಮಂಡಳಿ ಒತ್ತು

### ಗ್ರಾಮಗಳಿಗೆ ಭೇಟಿ ನೀಡಿ ವಾಸ್ತವ ಸ್ಥಿತಿಗತಿ ಪರಿಶೀಲಿಸಿದ ಕಾರ್ಯದರ್ಶಿ ರೂಪಾ

ನೈಜ್ಯ ದೆಸೆ ನ್ಯೂಸ್

ಕುಷ್ಟಗಿ: ಮದ್ಯಮುಕ್ತ ಗ್ರಾಮಗಳ ಸ್ಥಿರತೆ ಹಾಗೂ ಅಲ್ಲಿನ ವಾಸ್ತವ ಸ್ಥಿತಿಗತಿಗಳನ್ನು ತಿಳಿದುಕೊಳ್ಳುವ ಉದ್ದೇಶದಿಂದ ರಾಜ್ಯ ಮದ್ಯಪಾನ ಸಂಯಮ ಮಂಡಳಿಯ ನೂತನ ಕಾರ್ಯದರ್ಶಿ ರೂಪಾ ಅವರು ಭಾನುವಾರ ಕೊಪ್ಪಳ ಹಾಗೂ ಕುಷ್ಟಗಿ ತಾಲೂಕಿನ ವಿವಿಧ ಮದ್ಯಮುಕ್ತ ಗ್ರಾಮಗಳಿಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಿದರು.

ಇತ್ತೀಚೆಗೆ ಕೊಪ್ಪಳ ತಾಲೂಕಿನ ಲೇಬಗೇರಿ ಸಮೀಪದ ಹಟ್ಟಿ ಗ್ರಾಮದಲ್ಲಿ ರಾಜ್ಯ ಮದ್ಯಪಾನ ಸಂಯಮ ಮಂಡಳಿ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮದ್ಯಮುಕ್ತ ಗ್ರಾಮಗಳಿಗೆ ಪ್ರೋತ್ಸಾಹ ಹಾಗೂ ಸಂಯಮ ಪ್ರಶಸ್ತಿ ನೀಡಿ ಗೌರವಿಸಲಾಗಿತ್ತು. ಈ ಹಿನ್ನೆಲೆಯಲ್ಲಿ ಕಾರ್ಯದರ್ಶಿ ರೂಪಾ ಅವರು ಮದ್ಯಮುಕ್ತ ಗ್ರಾಮಗಳಿಗೆ ಖುದ್ದಾಗಿ ಭೇಟಿ ನೀಡಿ ಅಲ್ಲಿನ ಪರಿಸ್ಥಿತಿಯನ್ನು ಅವಲೋಕಿಸಿದರು.



ಕುಷ್ಟಗಿ ತಾಲೂಕಿನ ನಾಗರಾಳ, ಹಿರೇಬನ್ನಿಗೋಳ, ಕೆ. ಬೋದೂರು ತಾಂಡಾ ಹಾಗೂ ಮಾಳ ಗ್ರಾಮಗಳಿಗೆ ಭೇಟಿ ನೀಡಿದ ಅವರು, ಗ್ರಾಮಸ್ಥರೊಂದಿಗೆ ಸಂವಾದ ನಡೆಸಿ ಮದ್ಯಮುಕ್ತ ಗ್ರಾಮಗಳ ಸ್ಥಿರತೆ, ಎದುರಾಗುತ್ತಿರುವ ಸಮಸ್ಯೆಗಳು ಹಾಗೂ ಮುಂದಿನ ದಿನಗಳಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಚರ್ಚಿಸಿದರು.

ಗ್ರಾಮಸ್ಥರಿಂದ ಹಲವು ಸಲಹೆ ಹಾಗೂ ಮಾರ್ಗದರ್ಶನಗಳನ್ನು ಪಡೆದುಕೊಂಡರು. ಮದ್ಯಮುಕ್ತ ಗ್ರಾಮಗಳಿಗೆ ವಿಶೇಷ ಆದ್ಯತೆ ನೀಡಿ ಗ್ರಾಮಗಳಿಗೆ ಖುದ್ದಾಗಿ ಭೇಟಿ ನೀಡಿ ಜನರೊಂದಿಗೆ ಸಂವಾದ ನಡೆಸಿದ ಕಾರ್ಯದರ್ಶಿ ರೂಪಾ ಅವರ ಕ್ರಮಕ್ಕೆ ಗ್ರಾಮಸ್ಥರು ಮೆಚ್ಚುಗೆ ವ್ಯಕ್ತಪಡಿಸಿದರು. ಭೇಟಿ ನೀಡಿದ ಎಲ್ಲ ಗ್ರಾಮಗಳಲ್ಲಿಯೂ ಉತ್ತಮ ಸ್ಪಂದನೆ ದೊರೆತಿದ್ದು, ಮದ್ಯಮುಕ್ತ ವಾತಾವರಣವನ್ನು ಮುಂದುವರಿಸುವ ಕುರಿತು ಗ್ರಾಮಸ್ಥರು ತಮ್ಮ ಬದ್ಧತೆಯನ್ನು ವ್ಯಕ್ತಪಡಿಸಿದರು. ಗ್ರಾಮಸ್ಥರು ಮಾತನಾಡಿ, "ನಮ್ಮ ಗ್ರಾಮಗಳಲ್ಲಿ ಮದ್ಯ ಸಂಪೂರ್ಣವಾಗಿ ನಿರ್ಮೂಲನೆಯಾಗಬೇಕು.ಗ್ರಾಮದಲ್ಲಿ ಯಾವುದೇ ರೀತಿಯ ಮದ್ಯ ಲಭ್ಯವಾಗಬಾರದು ಎಂಬುದು ನಮ್ಮೆಲ್ಲರ ಕಳಕಳಿಯಾಗಿದೆ.

ಮದ್ಯಮುಕ್ತ ಗ್ರಾಮಗಳ ಆಶಯವನ್ನು ಮತ್ತಷ್ಟು ಬಲಪಡಿಸಲು ಸರ್ಕಾರ ಹಾಗೂ ಸಂಯಮ ಮಂಡಳಿ ಅಗತ್ಯ ಸಹಕಾರ ನೀಡಬೇಕು" ಎಂದು ಮನವಿ ಮಾಡಿದರು. ಈ ಸಂದರ್ಭದಲ್ಲಿ ಗಾಂಧಿ ಬಳಗದ ಸದಸ್ಯರಾದ ಶಿವಪ್ಪ ಜೋಗಿ, ಮಲ್ಲಪ್ಪ ಹವಳಿ, ಗುರುರಾಜ, ಶಿವಪ್ಪ ಹಡಪದ, ಭೀಮಪ್ಪ ಹೂಗಾರ, ಯುವರಾಜ ಬಡಿಗೇರ, ಸಾವಿತ್ರಿ ಎಂ. ಪ್ರಾಣೇಶ್ ಹಾಗೂ ಕುಷ್ಟಗಿ ಉಸ್ತುವಾರಿ ಮಾರುತಿ ಪೂಜಾರಿ ಉಪಸ್ಥಿತರಿದ್ದು, ಗ್ರಾಮಗಳಿಗೆ ಭೇಟಿ ನೀಡುವ ಸಂದರ್ಭದಲ್ಲಿ ಸಹಕಾರ ನೀಡಿದರು.

## ಸಾಹಿತ್ಯ ಸಿಂಚನ

### ಒಂಟಿ ಹೃದಯದ ಪಯಣ

ಒಂಟಿ ಹೃದಯದ ಪಯಣವಿದು,
ನೆನಪುಗಳ ನೆರಳಿನ ಜೊತೆಯಿದು?
ಹಾದಿಯುದ್ದಕ್ಕೂ ಮೌನವೇ ಸಂಗಾತಿ,
ಕಣ್ಣಂಚಿನಲ್ಲಿ ಮಡುಗಟ್ಟಿದ ನೋವೇ ಮಾತು.

ಜೊತೆಯಾಗಿ ನಡೆದವರು ದೂರವಾದರೂ,
ಅವರ ಹೆಜ್ಜೆ ಗುರುತುಗಳು ಉಳಿದಿವೆ?
ಮಾತಿಲ್ಲದ ರಾತ್ರಿಗಳ ನಡುವೆ,
ಹಳೆಯ ನೆನಪುಗಳು ಕಾಡುತ್ತಿವೆ.

ಕನಸುಗಳೆಲ್ಲ ಚೂರುಚೂರಾದರೂ,
ಭರವಸೆಯ ದೀಪ ಆರಿಲ್ಲ?
ಬಿದ್ದ ಕಣ್ಣೀರಿನ ಹನಿಗಳಲ್ಲೂ,
ಹೊಸ ನಾಳೆಯ ಕನಸು ಸತ್ತಿಲ್ಲ.


ಯಾರೂ ಜೊತೆಯಿಲ್ಲವೆಂದು,
ಜೀವನದ ದಾರಿ ನಿಲ್ಲುವುದಿಲ್ಲ?
ಒಂಟಿತನವೇ ಪಾಠವಾದಾಗ,
ಮನಸ್ಸು ನಿಧಾನವಾಗಿ ಗಟ್ಟಿಯಾಗುತ್ತದೆ.

ಒಂಟಿ ಹೃದಯದ ಈ ಪಯಣ,
ಒಂದು ದಿನ ಬೆಳಕನ್ನು ಕಾಣುವುದು?
ಕಳೆದುಕೊಂಡವರ ನೆನಪಿನಾಚೆ,
ಹೊಸ ಬದುಕು ನಗುತ್ತಾ ಕರೆಯುವುದು

### ಸಂಭ್ರಮದಿಂದ ಜರುಗಿದ ವಟಗಲ್ ಬಸವೇಶ್ವರ ಮಹಾರಥೋತ್ಸವ

❑ ನೈಜ್ಯ ದೆಸೆ ನ್ಯೂಸ್

**ಕವಿತಾಳ: ಪಟ್ಟಣ ಮೀಪದ ವಟಗಲ್ ಗ್ರಾಮದ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಭಕ್ತರ ಆರಾಧ್ಯ ದೈವ ಶ್ರೀ ಬಸವೇಶ್ವರ ದೇವರ ಜಾತ್ರೆಯು ಅತ್ಯಂತ ಸಡಗರ ಸಂಭ್ರಮದಿಂದ ಶ್ರಾವಣ ಮಾಸದ ಮೂರನೇ ಸೋಮವಾರ ಜರುಗಿತು.**



ಶ್ರಾವಣ ಮಾಸದ ಆರಂಭದಿಂದಲೂ ಪ್ರತಿದಿನ ದೇವ- ರಿಗೆ ಮಹಾರುದ್ರಾಭಿಷೇಕ, ಸಹಸ್ರ ಬಿಲ್ವಾರ್ಚನೆ ಸೇರಿದಂತೆ ಭಕ್ತ- ರಿಂದ ದೀಡನಮಸ್ಕಾರ ಇನ್ನಿತರ ಅರಕೆಗಳು ಸಲ್ಲುತ್ತಾ ಬಂದಿದ್ದು ಶ್ರಾವಣ ಮಾಸದಲ್ಲಿ ನಾಲ್ಕು ಸೋಮವಾರ ಬಂದಿದ್ದರಿಂದ ಮುರನೇ ಸೋಮವಾರ ಸಂಜೆ ಮಹಾ ರಥೋತ್ಸವ ಅದ್ದೂರಿಯಾಗಿ ಜರುಗಿತು. ವಟಗಲ್, ಅಮೀನಗಡ, ಯಕ್ಲಾಸಪೂರ, ಕವಿತಾಳ, ಬಸಾಪೂರ, ಪರಸಾಪೂರ, ಕಾರಲಕುಂಟಿ ಸೇರಿದಂತೆ ಸುತ್ತಮುತ್ತಲಿನ ಗ್ರಾಮದ ಸಹಸ್ರಾರು ಭಕ್ತರು ಭಾಗವಹಿಸಿ ರಥಕ್ಕೆ ಉತ್ತತ್ತಿ, ಮಂಡಾಳು ಎಸೆಯುವ ಮೂಲಕ ತಮ್ಮ ಭಕ್ತಿಯನ್ನು ಮೆರೆದರು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# ಶಿಕ್ಷಕ ಸಿದ್ದರಾಯ ಹಚಡದ್ ಅವರಿಗೆ ಭಾವಪೂರ್ಣ ವಯೋನಿವೃತ್ತಿ ಬೀಳ್ಕೊಡುಗೆ

❑ ನೈಜ್ಯ ದೆಸೆ ನ್ಯೂಸ್

**ಬಳಗಾನೂರು: ಶ್ರೀ ಬಸವೇಶ್ವರ ಸಂಯುಕ್ತ ಪ್ರೌಢ ಶಾಲೆಯ ಪ್ರಾಥಮಿಕ ವಿಭಾಗದ ಹಿರಿಯ ಶಿಕ್ಷಕರಾದ ಶ್ರೀಯುತ ಸಿದ್ದರಾಯ ಹಚಡದ್ ಅವರು ಸರ್ಕಾರದ ನಿಯಮಾನುಸಾರ ತಮ್ಮ ಸುದೀರ್ಘ ಹಾಗೂ ಯಶಸ್ವಿ ಸೇವೆಯಿಂದ ವಯೋನಿವೃತ್ತಿ ಹೊಂದಿದ ಹಿನ್ನೆಲೆಯಲ್ಲಿ, ಅವರಿಗೆ ಶಾಲೆಯ ಆವರಣದಲ್ಲಿ ಅತ್ಯಂತ ಭಾವಪೂರ್ಣ ಬೀಳ್ಕೊಡುಗೆ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.**

ಕಾರ್ಯಕ್ರಮವು ಕನ್ನಡ ಭಾಷಾ ಶಿಕ್ಷಕಿಂ- ಯರಾದ ಶ್ರೀಮತಿ ಬೋರಮ್ಮ ಅವರ ಅರ್ಥಪೂರ್ಣ ನಿರೂಪಣೆಯೊಂದಿಗೆ ಪ್ರಾರಂಭವಾಯಿತು. ತದನಂತರ ವಿಜ್ಞಾನ ವಿಷಯ ಶಿಕ್ಷಕರಾದ ಶ್ರೀ ಸೋಮಶೇಖರ್ ಸರ್ ಅವರು ಆಗಮಿಸಿದ ಎಲ್ಲ ಅತಿಥಿಗಳನ್ನು, ಶಿಕ್ಷಕರನ್ನು ಹಾಗೂ ವಿದ್ಯಾರ್ಥಿಗಳನ್ನು ಆತ್ಮೀಯವಾಗಿ ಸ್ವಾಗತಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಶಾಲೆಯ ಮುಖ್ಯ ಗುರುಗಳಾದ ಶ್ರೀ ಅಮರನಾಥ ಹಳ್ಳೂರ ಅವರು ಮಾತನಾಡಿ, "ಸಿದ್ದರಾಯ ಹಚಡದ್ ಅವರು ಕೇವಲ ಪಠ್ಯ ಬೋಧನೆಗಷ್ಟೇ ಸೀಮಿತವಾಗದೆ, ವಿದ್ಯಾರ್ಥಿಗಳಲ್ಲಿ ಉತ್ತಮ ಸಂಸ್ಕಾರ ಹಾಗೂ



ಮೌಲ್ಯಗಳನ್ನು ಬಿತ್ತಿದ ಆದರ್ಶ ಶಿಕ್ಷಕರು. ಅವರ ಶಿಸ್ತು, ಕರ್ತವ್ಯ ನಿಷ್ಠೆ ಮತ್ತು ಸರಳ ವ್ಯಕ್ತಿತ್ವ ಪ್ರತಿಯೊಬ್ಬರಿಗೂ ಮಾದರಿಯಾಗಿದೆ" ಎಂದು ಅವರ ಸೇವೆಯನ್ನು ಮುಕ್ತಕಂಠದಿಂದ ಶ್ಲಾಘಿಸಿದರು.

ಈ ಶುಭ ಸಂದರ್ಭದಲ್ಲಿ ಶಾಲಾ ಆಡಳಿತ ಮಂಡಳಿ ಹಾಗೂ ಸಹೋದ್ಯೋಗಿ ಶಿಕ್ಷಕರ ಪರವಾಗಿ ನಿವೃತ್ತ ಶಿಕ್ಷಕರಾದ ಶ್ರೀ ಸಿದ್ದರಾಯ ಹಚಡದ್ ಅವರಿಗೆ ಶಾಲು ಹೊದಿಸಿ, ನೆನಪಿನ ಕಾಣಿಕೆ ನೀಡಿ ಆತ್ಮೀಯವಾಗಿ ಗೌರವಿಸಿ ಸನ್ಮಾನಿಸಲಾಯಿತು. ಸನ್ಮಾನ ಸ್ವೀಕರಿಸಿ ಮಾತನಾಡಿದ ಸಿದ್ದರಾಯ ಅವರು, ತಮ್ಮ ಸುದೀರ್ಘ ಸೇವಾ ಅವಧಿಯಲ್ಲಿ ಸಹೋದ್ಯೋಗಿಗಳು ಮತ್ತು ವಿದ್ಯಾರ್ಥಿಗಳು ನೀಡಿದ ಪ್ರೀತಿ, ಗೌರವ ಹಾಗೂ ಸಹಕಾರವನ್ನು ಸ್ಮರಿಸಿ ಭಾವುಕರಾಗಿ ಧನ್ಯವಾದ ಸಮರ್ಪಿಸಿದರು. ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಎಲ್ಲ ಶಿಕ್ಷಕರು ಸಿದ್ದರಾಯ ಸರ್ ಅವರು ನಡೆದು ಬಂದ ಹಾದಿ, ಅವರ ಉನ್ನತ ವ್ಯಕ್ತಿತ್ವ ಹಾಗೂ ಕಾರ್ಯವೈಖ- ರಿಯ ಬಗ್ಗೆ ಭಾವುಕರಾಗಿ ಮಾತನಾಡಿ ತಮ್ಮ ನೆಚ್ಚಿನ ಸಹೋದ್ಯೋಗಿಯ ಜೊತೆಗಿನ ಒಡನಾಟದ ನೆನಪುಗಳನ್ನು ಹಂಚಿಕೊಂಡರು.

ಅವರಿಂದ ಸಂಸ್ಕಾರಯುತ ಶಿಕ್ಷಣ ಪಡೆದ ಎಲ್ಲ ವಿದ್ಯಾರ್ಥಿ-ವಿದ್ಯಾರ್ಥಿನಿಯರು ತಮ್ಮ ನೆಚ್ಚಿನ ಗುರುಗಳು ನಿವೃತ್ತಿ ಗೊಳ್ಳುತ್ತಿರುವ ವಿಷಯ ತಿಳಿದು ಕಣ್ಣೀರು ಸುರಿಸಿದರು. ಶಿಕ್ಷಕರು ಹಾಗೂ ವಿದ್ಯಾರ್ಥಿಗಳ ಈ ಭಾವನಾತ್ಮಕ ಕ್ಷಣಗಳಿಂದ ಸಭೆಯಲ್ಲಿದ್ದ ಪ್ರತಿಯೊಬ್ಬರ ಕಣ್ಣುಗಳು ಒದ್ದೆಯಾಗಿದ್ದವು. ಕಾರ್ಯಕ್ರಮದ ಕೊನೆಯಲ್ಲಿ ಶಾಲೆಯ ದೈಹಿಕ ಶಿಕ್ಷಣ ಶಿಕ್ಷಕರಾದ ಶ್ರೀ ಬಸವರಾಜ ಯಾದಗಿರಿ ಅವರು ಸಹ ನಿವೃತ್ತಿ ಹೊಂದಿದ ಶಿಕ್ಷಕರೊಂದಿಗಿನ ತಮ್ಮ ನೆನಪುಗಳನ್ನು ಹಂಚಿಕೊಂಡು, ಕಾರ್ಯಕ್ರಮದ ಯಶಸ್ಸಿಗೆ ಕಾರಣ- ರಾದ ಎಲ್ಲರಿಗೂ ವಂದನಾರ್ಪಣೆ ಸಲ್ಲಿಸಿದರು. ಈ ಬೀಳ್ಕೊಡುಗೆ ಸಮಾರಂಭದಲ್ಲಿ ಶಾಲೆಯ ಸರ್ವ ಸದಸ್ಯರು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ, ಪೋಷಕರು ಹಾಗೂ ನೂರಾರು ವಿದ್ಯಾರ್ಥಿಗಳು ಉಪಸ್ಥಿತರಿದ್ದು, ನಿವೃತ್ತ ಶಿಕ್ಷಕರಿಗೆ ಸುಖ, ಶಾಂತಿ, ಉತ್ತಮ ಆರೋಗ್ಯ ಹಾಗೂ ದೀರ್ಘಾಯುಷ್ಯದ ನಿವೃತ್ತ ಜೀವನದ ಶುಭ ಹಾರೈಸಿದರು.

# ವಿಜಯಪುರ ಜಿಲ್ಲೆ ವಿಶೇಷ ಸ್ಥಾನಮಾನಕ್ಕೆ ಆಗ್ರಹಿಸಿ ಮನವಿ

❑ ನೈಜ್ಯ ದೆಸೆ ನ್ಯೂಸ್

**ತಾಳಿಕೋಟೆ: ವಿಜಯಪುರ ಜಿಲ್ಲೆಯನ್ನು ಸಂವಿಧಾನದ ಕಲಂ 371(ಎ) ವ್ಯಾಪ್ತಿಗೆ ತಕ್ಷಣ ಸೇರ್ಪಡೆಗೊಳಿಸಿ, ಜಿಲ್ಲೆಯ ಜನ- ರಿಗೆ ಶಿಕ್ಷಣ, ಉದ್ಯೋಗ ಹಾಗೂ ಅಭಿವೃದ್ಧಿಯಲ್ಲಿ ವಿಶೇಷ ಅವಕಾಶ ಕಲ್ಪಿಸಬೇಕು.**

ಇಲ್ಲವಾದರೆ ದಶಕಗಳಿಂದ ನಿರ್ಲಕ್ಷ್ಯಕ್ಕೊಳಗಾಗಿರುವ ಉತ್ತರ ಕರ್ನಾಟಕಕ್ಕೆ ಪ್ರತ್ಯೇಕ ರಾಜ್ಯ ರಚಿಸುವ ನಿಟ್ಟಿನಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ತಹಶೀಲ್ದಾರ ಮಲ್ಲಿಕಾರ್ಜುನ ಅರಕೇರಿ ಯವರ ಮುಖಾಂತರ ಸರ್ಕಾರಕ್ಕೆ ಮಂಗಳವಾರ ಮನವಿ ಸಲ್ಲಿಸಲಾಯಿತು. ಮನವಿಯಲ್ಲಿ ವಿಜಯಪುರ ಜಿಲ್ಲೆ, ಕೃಷಿಯನ್ನೇ ಪ್ರಮುಖ ಜೀವನಾಧಾರವಾಗಿಸಿಕೊಂಡಿದೆ. ಆದರೆ ನಿರಂತರ ಬರಗಾಲ, ನೀರಾವರಿ ಕೊರತೆ, ಕೈಗಾರಿಕಾ ಹಿನ್ನಡೆ, ನಿರುದ್ಯೋಗ, ಉನ್ನತ ಶಿಕ್ಷಣ ಸಂಸ್ಥೆಗಳ ಕೊರತೆ ಹಾಗೂ ಮೂಲಸೌಕರ್ಯದ ಸಮಸ್ಯೆಗಳಿಂದ ಜಿಲ್ಲೆಯ ಜನರು ಹಲವು ವರ್ಷಗಳಿಂದ ಹಿಂದುಳಿದ ಸ್ಥಿತಿಯಲ್ಲಿದ್ದಾರೆ. ಜಿಲ್ಲೆಯ ಈ ಹಿಂದುಳಿದಿರುವಿಕೆಯನ್ನು ಡಾ. ಡಿ.ಎಂ. ನಂಜುಂಡಪ್ಪ ಸಮಿತಿಯ ವರದಿಯಲ್ಲಿಯೂ ಗುರುತಿಸಲಾಗಿದೆ. ಕಲಬುರಗಿ ಹೈಕೋರ್ಟ್ ಪೀಠ ಹಾಗೂ ಕಲ್ಯಾಣ ಕರ್ನಾಟಕ ಸಾರಿಗೆ ವ್ಯವಸ್ಥೆಯೊಂದಿಗೆ ವಿಜಯಪುರ ಜಿಲ್ಲೆ ನಿಕಟ ಆಡಳಿತಾತ್ಮಕ ಸಂಪರ್ಕ ಹೊಂದಿದ್ದರೂ, 371(ಎ) ಸೌಲಭ್ಯದಿಂದ ಜಿಲ್ಲೆಯನ್ನು ಹೊರಗಿಟ್ಟಿದ್ದಾರೆ.

"ವಿಜಯಪುರ ಜಿಲ್ಲೆಗೆ 371(ಎ) ನೀಡಿ; ನಮ್ಮ ಯುವಜನರಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ನ್ಯಾಯ ಒದಗಿಸಿ. ಜಿಲ್ಲೆಯ ಅಭಿವೃದ್ಧಿಗೆ ವಿಶೇಷ ಅನುದಾನ, ಶಾಶ್ವತ ನೀರಾವರಿ ಯೋಜನೆ, ಕೈಗಾರಿಕೆ ಹಾಗೂ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಆದ್ಯತೆ ನೀಡಿ. ಇಲ್ಲವಾದರೆ ಉತ್ತರ ಕರ್ನಾಟಕದ ನಿರ್ಲಕ್ಷ್ಯಕ್ಕೆ ಶಾಶ್ವತ ಪರಿಹಾರವಾಗಿ ಪ್ರತ್ಯೇಕ ಉತ್ತರ ಕರ್ನಾಟಕ ರಾಜ್ಯ ರಚನೆಗೆ ಮುಂದಾಗಿ" ಎಂಬುದು ಮನವಿದಾರರ ಸ್ಪಷ್ಟ ಆಗ್ರಹವಾಗಿದೆ.

ರಾಜ್ಯ ಸರ್ಕಾರವು



ವಿಧಾನಮಂಡಲದಲ್ಲಿ ನಿರ್ಣಯ ಅಂಗೀಕರಿಸಿ ಕೇಂದ್ರಕ್ಕೆ ಶಿಫಾರಸು ಸಲ್ಲಿಸುವ ಮೂಲಕ ವಿಜಯಪುರ ಜಿಲ್ಲೆಯ ಬಹುದಿನಗಳ ಬೇಡಿಕೆಗೆ ನ್ಯಾಯ ಒದಗಿಸಬೇಕು. ಇನ್ನು ಭರವಸೆ ಬೇಡ; ನಿರ್ಣಯ ಬೇಕು, ಘೋಷಣೆ ಬೇಕು, ಅನುಷ್ಠಾನ ಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ. ಈ ಸಂಧರ್ಭದಲ್ಲಿ ಡಾ: ವಿಜಯಕುಮಾರ ಕಾರ್ಚಿ, ನ್ಯಾಯವಾದಿ ಗಂಗಾಧರ ಕಸ್ತೂರಿ, ರವೀಂದ್ರ ಕಟ್ಟಿಮನಿ, ಡಾ. ಆನಂದ ಭಟ್, ಡಾ. ರವಿ ಅಗರವಾಲ, ಡಾ.ಎ.ಎ. ನಾಲಬಂದ, ತಮ್ಮಣ್ಣ ದೇಶಪಾಂಡೆ,ಸಂಭಾಜಿರಾವ್ ವಾಡಕರ, ಮಂಜು ಶೆಟ್ಟಿ, ರಾಘು ಚವ್ಹಾಣ, ಜಗದೀಶ ಬಿಳೆಭಾವಿ, ರಾಘು ಮಾನೆ, ಪ್ರಮೋದ ಅಗರವಾಲ, ಕುಮಾರ ಸುರಪುರ, ರಘು ಹಜೇರಿ, ವಸಂತ ಜೋಶಿ, ಮುತ್ತು ಯಾಳವಾರ, ಹಣಮಂತ ವಡ್ಡರ ಕಲಕೇರಿ, ಶಂಕರಗೌಡ ಬಿರಾದಾರ, ಈಶ್ವರ ಹೂಗಾರ, ರಾಘ ಮಾನೆ ಹಾಗೂ ವಿವಿಧ ರೈತ ಪರ ಸಂಘಟನೆಗಳು, ಗಣ್ಯ ವ್ಯಾಪಾರಸ್ಥರು, ವಿವಿಧ ಸಮಾಜದ ಮುಖಂಡರು ಪಟ್ಟಣದ ಗಣ್ಯರು ಹಾಜರಿದ್ದರು.

# ನಿಡಶೇಸಿ ಶ್ರೀ ಚನ್ನಬಸವೇಶ್ವರ ಶಿವಾಚಾರ್ಯ ಸ್ವಾಮೀಜಿ ಲಿಂಗೈಕ್ಯ

## ಧರ್ಮ ಶಿಕ್ಷಣ ಕ್ಷೇತ್ರಕ್ಕೆ ಅಪಾರ ಸೇವೆ ಸಲ್ಲಿಸಿದ 78ರ ಹರೆಯದ ಶ್ರೀಗಳು ವಿಧಿವಶ ಮಠದಲ್ಲಿ ಭಕ್ತರ ಸಾಗರ

❑ ನೈಜ್ಯ ದೆಸೆ ನ್ಯೂಸ್

**ಕುಷ್ಟಗಿ: ತಾಲೂಕಿನ ನಿಡಶೇಸಿ ಶ್ರೀ ಚನ್ನಬಸವೇಶ್ವರ ಮಠದ ಪೀಠಾಧಿಪತಿಗಳಾದ ಶ್ರೀ ಚನ್ನಬಸವೇಶ್ವರ ಶಿವಾಚಾರ್ಯ ಸ್ವಾಮೀಜಿ (78) ಅವರು ಮಂಗಳವಾರ ಬೆಳಗಿನ ಜಾವ ಲಿಂಗೈಕ್ಯರಾದರು. ಕಳೆದ 15 ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದ ಶ್ರೀಗಳಿಗೆ ಬೆಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿತ್ತು. ಚಿಕಿತ್ಸೆ ಫಲಕಾರಿಯಾಗದೆ ನಿಡಶೇಸಿ ಶ್ರೀಮಠದಲ್ಲಿಯೇ ಅವರು ಕೊನೆಯುಸಿರೆಳೆದರು.**

ಪೂರ್ವಾಶ್ರಮದಲ್ಲಿ ಶಾಂತಮೂರ್ತಯ್ಯ ಎಂದು ಕರೆಯಲ್ಪಡುತ್ತಿದ್ದ ಶ್ರೀಗಳು ವೇದಮೂರ್ತಿ ಮಹಾಂತಯ್ಯ ಹಾಗೂ ನೀಲಮ್ಮ ದಂಪತಿಯ ಪುತ್ರರಾಗಿದ್ದರು. ಮಠದ ಕ- ರಿಬಸವ ಕಿರಿಯ ಶ್ರೀಗಳಾಗಿ ಸೇವೆ ಸಲ್ಲಿಸಿದ್ದ ಅವರು, 2000ರಲ್ಲಿ ನಿಡಶೇಸಿ ಮಠದ 24ನೇ



ಪೀಠಾಧಿಪತಿಗಳಾಗಿ ಅಧಿಕಾರ ವಹಿಸಿಕೊಂಡಿದ್ದರು. ನಿಡಶೇಸಿ ಮೂಲಮಠದ ಜತೆಗೆ ಕುಷ್ಟಗಿ ಕಲ್ಮಠ, ಗೆಜ್ಜೆಬಾವಿ, ಜಾಲಕಮಲದಿನ್ನಿ ಹಾಗೂ ಗುಡದೂರು ಶಾಖಾ ಮಠಗಳ ಜವಾಬ್ದಾರಿಯನ್ನು ನಿರ್ವಹಿಸಿದ್ದರು.

ವೀರಶೈವ ಲಿಂಗಾಯತ ಧರ್ಮಾಧಾ- ರಿತ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುವ ಮೂಲಕ ಧರ್ಮೋದ್ಧಾರ, ಶೈಕ್ಷಣಿಕ ಅಭಿವೃದ್ಧಿ ಹಾಗೂ ಸಾಮಾಜಿಕ ಮೌಢ್ಯಗಳ ನಿವಾರಣೆಗೆ ತಮ್ಮದೇ ಆದ ಕೊಡುಗೆ ನೀಡಿದ್ದರು. ಶ್ರೀಗಳ ಲಿಂಗೈಕ್ಯದ ಸುದ್ದಿ ತಿಳಿಯುತ್ತಿದ್ದಂತೆ ನಿಡಶೇಸಿ ಮಠದತ್ತ ಭಕ್ತರ ದಂಡೇ ಹರಿದುಬಂತು. ಅಪಾರ ಸಂಖ್ಯೆಯ ಭಕ್ತರು, ಅಭಿಮಾನಿಗಳು ಹಾಗೂ ವಿವಿಧ ಕ್ಷೇತ್ರಗಳ ಗಣ್ಯರು ಶ್ರೀಗಳ ಅಂತಿಮ ದರ್ಶನ ಪಡೆದು ಕಂಬನಿ ಮಿಡಿದರು. ಮಾಜಿ ಸಚಿವ ಅಮರೇಗೌಡ ಪಾಟೀಲ ಬಯ್ಯಾಪೂರ ಶಾಸಕರಾದ ದೊಡ್ಡನಗೌಡ ಎಚ್ ಪಾಟೀಲ ಕೆ ಮಹೇಶ ಹಸನಸಾಬ ದೋಟಿಹಾಳ ಕೆ ಶರಣಪ್ಪ ಸೇರಿದಂತೆ ಹಲವು ಗಣ್ಯರು ಹಾಗೂ ಮುಖಂಡರು ಅಂತಿಮ ದರ್ಶನ ಪಡೆದು ಸಂತಾಪ ಸೂಚಿಸಿದರು.

ಮದ್ದಾನೇಶ್ವರ ಶ್ರೀ ಕರಿಬಸವ ಶಿವಾಚಾರ್ಯ ಸ್ವಾಮೀಜಿ, ಚಳಗೇರಾ ಶ್ರೀ ವೀರಸಂಗಮೇಶ್ವರ ಸ್ವಾಮೀಜಿ ಹಾಗೂ ಶ್ರೀ ಅಭಿನವ ಕರಿಬಸವ ಶಿವಾಚಾರ್ಯ ಸ್ವಾಮೀಜಿ ಸೇರಿದಂತೆ ವಿವಿಧ ಮಠಾಧೀಶರು ಶ್ರೀಗಳ ಅಗಲಿಕೆಗೆ ಸಂತಾಪ ವ್ಯಕ್ತಪಡಿಸಿದ್ದಾರೆ. ಇಂದು ಸಂಜೆ 4ಕ್ಕೆ ಕ್ರಿಯಾ ಸಮಾಧಿ ಲಿಂಗೈಕ್ಯ ಶ್ರೀ ಚನ್ನಬಸವೇಶ್ವರ ಶಿವಾಚಾರ್ಯ ಸ್ವಾಮೀಜಿಗಳ ಕ್ರಿಯಾ ಸಮಾಧಿ ವಿಧಿವಿಧಾನಗಳು ಮಂಗಳವಾರ ಸಂಜೆ 4 ಗಂಟೆಗೆ ನಿಡಶೇಸಿ ಶ್ರೀಮಠದ ಆವರಣದಲ್ಲಿ ನಡೆಯಲಿವೆ ಎಂದು ಮಠದ ಮೂಲಗಳು ತಿಳಿಸಿವೆ.

# ಬಳ್ಳಾರಿ ಚಲೋ ಪಾದಯಾತ್ರೆಗೆ ಕಹಳೆ ಊದುವ ಮೂಲಕ ಚಾಲನೆ

## ಭ್ರಷ್ಟರಿಂದ ಭ್ರಷ್ಟರಿಗಾಗಿ ಭ್ರಷ್ಟರಿಗೋಸ್ಕರ ಇರುವ ಸರಕರವೇ ಕಾಂಗ್ರೇಸ್ ಸರಕಾರ : ಬಿ ವೈ ವಿಜಯೇಂದ್ರ

❑ ನೈಜ್ಯ ದೆಸೆ ನ್ಯೂಸ್

**ಲಿಂಗಸಗೂರು: ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಕಾಂಗ್ರೆಸ್ ಸರ್ಕಾರದ ವೈಫಲ್ಯಗಳು, ಭ್ರಷ್ಟಾಚಾರ ಮತ್ತು ಜನವಿರೋಧಿ ಧೋರಣೆಗಳನ್ನು ಖಂಡಿಸಿ ಭಾರತೀಯ ಜನತಾ ಪಾರ್ಟಿ (ಬಿಜೆಪಿ) ವತಿಯಿಂದ ಹಮ್ಮಿಕೊಳ್ಳಲಾಗಿರುವ ಬೃಹತ್ "ಬಳ್ಳಾರಿ ಚಲೋ" ಪಾದಯಾತ್ರೆಗೆ ಲಿಂಗಸಗೂರು ಪಟ್ಟಣದಲ್ಲಿ ಅದ್ದೂರಿಯಾಗಿ ಬಳ್ಳಾರಿ ಚಲೋ ಪಾದಯಾತ್ರೆಗೆ ಕಹಳೆ ಊದುವ ಮೂಲಕ ಚಾಲನೆ ನೀಡಿ ನಂತರ ಮಾತನಾಡಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ ವಿಜೇಯೇಂದ್ರ ಭ್ರಷ್ಟರಿಂದ,**

ಭ್ರಷ್ಟರಿಗಾಗಿ ಭ್ರಷ್ಟರಿಗೋಸ್ಕರ ಎಂಬಂತೆ ನಡೆಯುತ್ತಿರುವ ಭ್ರಷ್ಟಚಾರಿ ಸರ್ಕಾರದ ವಿರುದ್ಧ ಉಗ್ರ ಹೋರಾಟವನ್ನು ಹಮ್ಮಿಕೊಂಡಿದ್ದೇವೆ ಮುಂದಿನ ದಿನಗಳಲ್ಲಿ ರಾಜ್ಯದ ರಾಜಕೀಯ ದಿಕ್ಕನ್ನು ಬದಲಾಯಿಸುವ ಶಕ್ತಿ ರಾಜ್ಯದ ಜನರಿಗೆ ಇದೆ. ನಾಗೇಂದ್ರ ಅವರು ರಾಜಿನಾಮೆ ಕೊಟ್ಟ ಮೇಲೆಯೂ ಯಾಕೆ ಪಾದಯಾತ್ರೆ ಮಾಡುತ್ತಿದ್ದಾರೆ ಎಂದು ಮುಖ್ಯಮಂತ್ರಿಗಳು ಪ್ರಶ್ನೆಮಾಡುತ್ತಾರೆ. ರಾಜ್ಯದ ದಲಿತರ, ರೈತರ, ಮಹಿಳೆಯರ, ಬಡವರ ವಿರೋಧಿಯಾಗಿರುವ ಭ್ರಷ್ಟ ಸರ್ಕಾರವನ್ನು ಕಿತ್ತೊಗೆಯುವ ಸಂಕಲ್ಪವನ್ನ ಮಾಡಿ ಈ ಪಾದಯಾತ್ರೆಯನ್ನು ಮಾಡುತ್ತಿದ್ದೇವೆ ಎಂದು ಕಿಡಿಕಾ- ರಿದರು. ರಾಜ್ಯ ಸರ್ಕಾರದ ಜನವಿರೋಧಿ ನೀತಿಯನ್ನು ಧಿಕ್ಕರಿಸಿ, ವಾಲ್ಮೀಕಿ ಅಭಿವೃದ್ಧಿ ನಿಗಮದಿಂದ ಸರ್ಕಾರದ ಬೊಕ್ಕಸವನ್ನು ಲೂಟಿ ಮಾಡಿರುವ ಭ್ರಷ್ಟ ಸರಕಾರದ ವಿರುದ್ಧ ಮಾಡುತ್ತಿರುವ ಪಾದಯಾತ್ರೆ ಎಂದು ರಾಜ್ಯ ಸರ್ಕಾರದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು.

ನಂತರಮಾತನಾಡಿದ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ : ರಾಜ್ಯದಲ್ಲಿ ಭ್ರಷ್ಟ ಆಡಳಿತ ವ್ಯವಸ್ಥೆ ಮುಂದುವರಿದಿದ್ದು, ಸರ್ಕಾರದ ಜನವಿರೋಧಿ



ನೀತಿಗಳು ಹಾಗೂ ಹಗರಣಗಳನ್ನು ಜನರಿಗೆ ಮುಟ್ಟಿಸುವ ಉದ್ದೇಶದಿಂದ ಈ 10 ದಿನಗಳ ಪಾದಯಾತ್ರೆಯನ್ನು ಹಮ್ಮಿಕೊಳ್ಳಲಾಗಿದೆ. ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಗಳು ಸಂಪೂರ್ಣವಾಗಿ ಕುಂಠಿತಗೊಂಡಿದ್ದು, ಭ್ರಷ್ಟಾಚಾರದ ಸರ್ಕಾರದ ವಿರುದ್ಧ ಜನರು ಧ್ವನಿ ಎತ್ತಬೇಕಾಗಿದೆ ಎಂದು ಕಿಡಿಕಾರಿದರು. ನಂತರ ಮಾತನಾಡಿದ ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ :ರಾಜ್ಯ ಸರ್ಕಾರವು ದಲಿತರು, ಹಿಂದುಳಿದವರು ಹಾಗೂ ಮಹಿಳೆಯರ ರಕ್ಷಣೆ ಮಾಡುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ. ರಾಜ್ಯದಲ್ಲಿ ದಲಿತರು, ಹಿಂದುಳಿದವ- ರಿಗೆ ರಕ್ಷಣೆಯೇ ಇಲ್ಲದಾಗಿದೆ ಎಂದು ಆರೋಪಿಸಿದರು.

ರಾಜ್ಯದಲ್ಲಿ ದಲಿತ ಸಮುದಾಯದವರ ಮೇಲಿನ ದೌರ್ಜನ್ಯ ಪ್ರಕರಣಗಳು ಹೆಚ್ಚುತ್ತಿದ್ದು, ಸರ್ಕಾರವು ಸಂತ್ರಸ್ತರಿಗೆ ಸೂಕ್ತ ನ್ಯಾಯ ಒದಗಿಸುವಲ್ಲಿ ವಿಫಲವಾಗಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ಖಅ/ಖಖ) ಕಲ್ಯಾಣಕ್ಕಾಗಿ ಮೀಸಲಿಟ್ಟಿರುವ ಅನುದಾನವನ್ನು ದುರ್ಬಳಕೆ ಮಾಡಲಾಗುತ್ತಿದೆ. ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಸಂಪೂರ್ಣ ಹದಗೆಟ್ಟಿರುವುದಕ್ಕೆ ಮಹಿಳೆಯರು ಮತ್ತು ಹೆಣ್ಣುಮಕ್ಕಳ ಮೇಲಿನ ದೌರ್ಜನ್ಯಗಳೇ ಸಾಕ್ಷಿಯಾಗಿದ್ದು, ಸಾರ್ವಜನಿಕರಿಗೆ ರಕ್ಷಣೆ ಇಲ್ಲದಂತಾಗಿದೆ ಎಂದು ಕಳವಳ ವ್ಯಕ್ತಪಡಿಸಿದರು. ನಂತರ ಮಾತನಾಡಿದ

ಆರ್. ಅಶೋಕ : ರಾಜ್ಯದಲ್ಲಿ ಬರಗಾಲ ಬಂದಿದೆ ರೈತರು ಕಂಗಾಲಾಗಿದ್ದಾರೆ. ಬರಪರಿಹಾರ ನೀಡಲು ಸರ್ಕಾರದಲ್ಲಿ ಹಣವಿಲ್ಲ. ಬರಪೀಡಿತ ತಾಲೂಕುಗಳ ಘೋಷಣೆಯನ್ನು ಕೂಡ ಸರ್ಕಾರ ಮಾಡಲು ಆಗಿಲ್ಲ. ಬೆಳೆ ಇಲ್ಲದೆ ಸಂಕಷ್ಟಕ್ಕೆ ಇಡಾಗಿರುವ ರೈತರನ್ನು ಈ ಕಾಂಗ್ರೆಸ್ ಸರ್ಕಾರ ತೀವ್ರವಾಗಿ ಕಡೆಗಣಿಸಿದೆ. ರೈತರಿಗೆ ಬೆಂಬಲವಾಗಿ ಸರ್ಕಾರದ ವಿರುದ್ಧ ಹೋರಾಟ ಮಾಡಲು ನಮ್ಮ ಬಿಜೆಪಿ ಪಕ್ಷ ಇದೆ. ನಾಗೇಂದ್ರನ ಕಡೆಯಿಂದ ಲೂಟಿಮಾಡಿ ವಿವಿಧ ಚುನಾವಣೆಯಲ್ಲಿ ಸರ್ಕಾರ ಖರ್ಚುಮಾಡಿದೆ . ಇನ್ನು ಕೆ ಪಿ ಎಸ್ ಸಿ ಹಗರಣ ಹೊರತಂದಿದ್ದು ನಾನು ಹಲವು ಬಾರಿ ಸುದ್ದಿಗೋಷ್ಠಿ ಮಾಡಿದ್ದೇನೆ ಕೆ ಪಿ ಎಸ್ ಸಿ ಯಲ್ಲಿ ಐಎಎಸ್ ಅಧಿಕಾರಿಯನ್ನು ಬಂಧಿಸಿದ್ದಾರೆ ಅಧಿಕಾರಿಗಳನ್ನು ಬಂದಿಸಿದರೆ ಆಗೋದಿಲ್ಲ ಕೆ ಪಿ ಎಸ್ ಸಿ ಅಧ್ಯಕ್ಷರ ಪ್ರಭಾವ ಗೊಳಿಸಿ ಅವರು ನೇಮಕಾತಿ ಮಾಡಿಕೊಂಡಿದ್ದಾರೆ ಹಗರಣದಲ್ಲಿ ಯಾರು ಭಾಗಿಯಾಗಿದ್ದರೋ ಅವರನ್ನು ಬಂಧಿಸಿ ಶಿಕ್ಷೆ ಕೊಡಿಸಲಿ ಕೆ ಪಿ ಎಸ್ ಸಿ ಹಗರಣದಲ್ಲಿ ಬಿಜೆಪಿ ಮುಖಂಡನ ಬಂಧನ ವಿಚಾರಕ್ಕೂ ಮಾತನಾಡಿ ಅವರೇನು ಬಿಜೆಪಿ ಅಧ್ಯಕ್ಷನೋ ಪದಾಧಿಕಾರಿಯೋ ಉನ್ನತ ಹುದ್ದೆಯಲ್ಲಿರೋರು ಯಾರೇ ಆಗಲಿ ಮೊದಲು ಬಂಧಿಸಿ ತನಿಖೆಗೆ ಒಳಪಡಿಸಿ ಈಗಾಗಲೇ ವಾಲ್ಮೀಕಿ ಹಗರಣದಲ್ಲಿ ಸರಕಾರದ ಒಂದು ವಿಕೇಟ್ ಪತನ ಗೊಂಡಿದೆ.

ಕೆ ಪಿ ಎಸ್ ಸಿ ಹಗರಣದಲ್ಲಿ ಮತ್ತೊಂದು ವಿಕೇಟ್ ಪತನ ಗೊಳ್ಳುವುದು ಖಚಿತ ಜೊತೆಗೆ ಮತ್ತಷ್ಟು ವಿಕೇಟ್ ಬೀಳುತ್ತದೆ ಎಂದು ಬಾಂಬ್ ಸಿಡಿಸಿದರು . ಸಿ ಟಿ ರವಿ ಮಾತನಾಡಿ : 7,500 ಕೋಟಿ ಗೃಹಲಕ್ಷ್ಮಿ ಹಣ ಎಲ್ಲೋಯ್ತು? ಯಾರ ಖಾತೆಗೆ ? ವಾಲ್ಮೀಕಿ ನಿಗಮದಲ್ಲಿನ 187 ಕೋಟಿ ಹಣ ನಕಲಿ ಖಾತೆಗಳಿಗೆ ವರ್ಗಾವಣೆಯಾಗಿದೆ. ಆರೋಪ ಹೊತ್ತ ನಾಗೇಂದ್ರ ಅವರನ್ನು ಸಚಿವರನ್ನಾಗಿ ಮಾಡಿದ್ದಕ್ಕೆ ನಾವು ಹೋರಾಟ ಮಾಡಿದ್ದೆವು. ಪ್ರಮಾಣದ ಲೂಟಿ ಹಣ ಸರ್ಕಾರಿ ಖಜಾನೆಗೆ ವಾಪಸ್ ಬಂದಿಲ್ಲ , 7,500 ಕೋಟಿ ಗೃಹಲಕ್ಷ್ಮಿ ಹಣ ಎಲ್ಲೋಯ್ತು? ಪಂಚ ಗ್ಯಾರೆಂಟಿಯ ಮೂರು ವರ್ಷದ ಸಂಭ್ರಮದಲ್ಲಿ ತೊಡಗಿದ್ದಾರೆ. ಮೂರು ತಿಂಗಳ ಗೃಹಲಕ್ಷ್ಮಿ ಹಣ ಎಲ್ಲೋಯ್ತು? ಸರ್ಕಾರದ ಖಜಾನೆಯಿಂದ ಬಿಡುಗಡೆಯಾದ ಹಣ ಫಲಾನುಭವಿಗಳ ಖಾತೆಗೆ ತಲುಪಬೇಕಿತ್ತು, ತಲುಪಿಲ್ಲ.ಆ ಹಣ ಏನಾದರೂ ನಕಲಿ ಖಾತೆಗೆ ಹೋಗಿದೆಯೇ? ಇದರ ಬಗ್ಗೆ ಸ್ಪಷ್ಟನೆ ಇಲ್ಲ ಎಂದು ಪ್ರಶ್ನಿಸಿದರು. ಬಾಕಿ ಹಣ ಬಿಡುಗಡೆ ಮಾಡಬೇಕು. ಹೈದರಾಲಿ ಲೆಕ್ಕ, ಮೋಸದ ಲೆಕ್ಕ ಇತ್ತು. ಹೈದರಾಲಿ ಲೆಕ್ಕ ಬಿಟ್ಟು ಗೃಹಲಕ್ಷ್ಮಿ ಹಣ ಹಾಕಿ. ವರ್ಷದ ಸಂಬಳ , ಮಾಸಾಸನ ಕೊಡದೇ ಮುಂದಕ್ಕೆ ಹಾಕಿದ್ದಾರೆ ಕಾಂಗ್ರೆಸ್ ಸರ್ಕಾರ ಹೈದರಾಲಿ ಲೆಕ್ಕ ತೋರಿಸಬೇಡಿ. ಹೈದರಾಲಿ ಲೆಕ್ಕ, ಕಾಂಗ್ರೆಸ್ ಲೆಕ್ಕ ಒಂದೇ. ಹಾಗಾಗೋದಕ್ಕೆ ಬಿಜೆಪಿ ಬಿಡೋದಿಲ್ಲ ಆಡು ಮುಟ್ಟದ ಸೊಪ್ಪಿಲ್ಲ ಕಾಂಗ್ರೆಸ್ ಮಾಡದ ಹಗರಣ ವಿಲ್ಲ ರಾಜ್ಯದ ಜನರ ಹಿತಕ್ಕಾಗಿ ನಮ್ಮ ಹೋರಾಟ ಐದು ತಿಂಗಳಿನಿಂದ ಭಾಗ್ಯಲಕ್ಮಿ ಹಣ ಬಂದಿಲ್ಲ ಅಡುಗೆ ಎಣ್ಣೆಯಿಂದ ಹಿಡಿದು ಕುಡಿಯುವ ಎಣ್ಣೆವರೆಗೆ ಬೆಲೆ ಏರಿಕೆ ಮಾಡುತ್ತಿದ್ದಾರೆ. ಇದು ರಾಜಕೀಯ ಲಾಭಕ್ಕಾಗಿ ನಡೆಸುತ್ತಿರುವ ಪಾದಯಾತ್ರೆಯಲ್ಲ ಜನರ ಹಿತಕ್ಕಾಗಿ ಜನರ ಅನುಕೂಲಕ್ಕಾಗಿ ಭ್ರಷ್ಟ ಕಾಂಗ್ರೆಸ್ ಸರಕಾರದ ವಿರುದ್ಧ ನಮ್ಮ ಹೋರಾಟ ಎಂದರು ಈ ಸಂದರ್ಭದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಬಿ ಎಸ್ ಯಡಿಯೂರಪ್ಪ , ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಆರ್ ಅಶೋಕ್ , ಬಸವರಾಜ ಬೊಮ್ಮಾಯಿ, ರಾಜ್ಯ ಸಹ ಉಸ್ತುವಾರಿ ಪಿ.ಸುಧಾಕರ ರೆಡ್ಡಿ, ಮಾಜಿ ಉಪಮುಖ್ಯಮಂತ್ರಿ ಗೋವಿಂದ ಕಾರಜೋಳ, ಶಾಸಕರಾದ ಗಾಲಿ ಜನಾರ್ದನ ರೆಡ್ಡಿ, ಮಾನಪ್ಪ ಡಿ.ವಜ್ಜಲ್, ಡಾ.ಎಸ್.ಶಿವರಾಜ ಪಾಟೀಲ್, ರಾಜ್ಯ ಉಪಾಧ್ಯಕ್ಷ ರಾಜುಗೌಡ ನಾಯಕ, ಮಾಜಿ ಸಚಿವ ಶಿವನಗೌಡ ನಾಯಕ, ಬಿ.ವಿ.ನಾಯಕ, ಪಿ.ರಾಜೀವ್, ಶಶೀಲ್ ಜಿ.ನಮೋಶಿ, ಬಸನಗೌಡ ಬ್ಯಾಗವಾಟ್, ಅರವಿಂದ ಬೆಲ್ಲದ್, ರವಿಕುಮಾರ , ಶ್ರೀ ರಾಮುಲು , ಜಗದೀಶ್ ಶೆಟ್ಟರ್ , ಸಿ ಟಿ ರವಿ , ಭೈರತಿ ಬಸವರಾಜ್ ಸೇರಿದಂತೆ ಕೋರ್ ಕಮಿಟಿ ಸದಸ್ಯರು, ಸಂಸದರು, ಶಾಸಕರು, ವಿಧಾನ ಪರಿಷತ್ ಸದಸ್ಯರು, ರಾಜ್ಯ ಪದಾಧಿಕಾರಿಗಳು, ಜಿಲ್ಲಾಧ್ಯಕ್ಷರು ಹಾಗೂ ಪಕ್ಷದ ಕಾರ್ಯಕರ್ತರು ಭಾಗವಹಿಸಿದ್ದರು.

## ನೇಮಕಾತಿ ಪ್ರಕಟಣೆ

**KPSC ನೇಮಕಾತಿ 2026 – 319 KAS ಗ್ರೂಪ್ A ಮತ್ತು B ಗೆಜೆಟೆಡ್ ಪ್ರೊಬೇಷನರ್ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಆಗಸ್ಟ್ 31, 2026**

KPSC ನೇಮಕಾತಿ 2026: KPSCಯು 2026–27ನೇ ಸಾಲಿನ 319 ಗ್ರೂಪ್–A ಮತ್ತು B ಗೆಜೆಟೆಡ್ ಪ್ರೊಬೇಷನರ್ ಹುದ್ದೆಗಳ ಅಧಿಸೂಚನೆಯನ್ನು ಪ್ರಕಟಿಸಿದೆ. ಕರ್ನಾಟಕ ಲೋಕಸೇವಾ ಆಯೋಗವು (KPSC) ಆಗಸ್ಟ್ 2026ರ ಅಧಿಕೃತ ಅಧಿಸೂಚನೆಯ ಮೂಲಕ 319 KAS ಗ್ರೂಪ್–A ಮತ್ತು B ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಕರ್ನಾಟಕ ಸರ್ಕಾರದಲ್ಲಿ ಉದ್ಯೋಗವನ್ನು ಬಯಸುವವರು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 31–ಆಗಸ್ಟ್–2026 ರೊಳಗೆ (ಅಂತಿಮ ದಿನಾಂಕವನ್ನು 07–ಸೆಪ್ಟೆಂಬರ್–2026 ರವರೆಗೆ ವಿಸ್ತರಿಸಲಾಗಿದೆ) ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಅಧಿಕೃತ ವೆಬ್‌ಸೈಟ್: kpsc.kar.nic.in

# ಮಹಾದೇವಿ ಯಲ್ಲಮ್ಮ, ಮಾರೆಮ್ಮ, ಹುಲಿಗೆಮ್ಮ ದೇವಿಯ ಗಂಗೆಸ್ಥಳ ಮಹೋತ್ಸವ

ನೈಜ್ಯ ದೆಸೆ ನ್ಯೂಸ್

ಬಳ್ಳಾರಿ / ಕಂಪ್ಲಿ : ಪಟ್ಟಣದಲ್ಲಿ ಶ್ರೀ ಮಹಾದೇವಿ ಯಲ್ಲಮ್ಮ, ಮಾರೆಮ್ಮ, ಹುಲಿಗೆಮ್ಮ ದೇವಿಯ ಗಂಗೆಸ್ಥಳ ಮಹೋತ್ಸವ ಕಾರ್ಯಕ್ರಮ ವಿಜೃಂಭಣೆಯಿಂದ ಮಂಗಳವಾರ ಜರುಗಿತು. ಪ್ರತಿ ಐದು ವರ್ಷಕ್ಕೊಮ್ಮೆ ನಡೆಯುವ ದೇವಿಯರ ಗಂಗೆಸ್ಥಳ ಮೆರವಣಿಗೆ ಈ ಬಾರಿ ಅತ್ಯಂತ ಸಂಭ್ರಮ ಸಡಗರದಿಂದ ಸಕಲ ಕಲಾ ಪ್ರಕಾರಗಳೊಂದಿಗೆ ನಡೆಯಿತು.

ಕಂಪ್ಲಿ–ಕೋಟೆಯ ತುಂಗಭದ್ರ ನದಿ ತಟದಲ್ಲಿ ಗಂಗೆಪೂಜೆ ಪೂಜೆ ಸಲ್ಲಿಸಿದ ನಂತರ ವೆಂಕಟರಮಣ ದೇವಸ್ಥಾನದಿಂದ ಆರಂಭಗೊಂಡ ಭವ್ಯ ಮೆರವಣಿಗೆ ಗಂಡುಗಲಿ ಕುಮಾರರಾಮನ ಕೋಟೆ ಮುಖಾಂತರ ಪಟ್ಟಣದ ನಡುವಲ ಮಸೀದಿ, ಡಾಕ್ಟರ್ ರಾಜಕುಮಾರ್



ಮುಖ್ಯ ರಸ್ತೆ, ಮಾರೆಮ್ಮ ದೇವಸ್ಥಾನ, ಅಂಬೇಡ್ಕರ್ ವೃತ್ತ, ಗಂಗಾನಗರ ಮೂಲಕ ಸಂಚರಿಸಿ, ಯಲ್ಲಮ್ಮ ದೇವಸ್ಥಾನದಲ್ಲಿ ಸಂಪನ್ನಗೊಂಡಿತು. ಈ ಮೆರವಣಿಗೆಯಲ್ಲಿ ಉಡುಪಿಯ ಚಂಡಿ ಮೇಳ, ಕೊಟ್ಟೂರಿನ ನಂದಿಕೋಲು, ಕಂಪ್ಲಿ ಮತ್ತು ಮಲಪನಗುಡಿಯ ಡೊಳ್ಳು ಕುಣಿತ, ಕಂಪ್ಲಿ ವಿರುಪ್ಪಣ್ಣ ತಾತನವರ ಭಜನಾ ಮಂಡಳಿ, ತಾಷಾರಾಂಡೋಲ್ ಸೇರಿದಂತೆ ನಾನಾ ಕಲಾಪ್ರಕಾರಗಳು ಪಾಲ್ಗೊಂಡಿದ್ದವು. ಈ ಮೆರವಣಿಗೆಯಲ್ಲಿ ಹಾಲಿ ಶಾಸಕ ಜೆ.ಎನ್.ಗಣೇಶ್, ಮಾಜಿ ಶಾಸಕ ಟಿ.ಹೆಚ್.ಸುರೇಶ್ ಬಾಬು ಪಾಲ್ಗೊಂಡು ದೇವಿಯ ದರ್ಶನದೊಂದಿಗೆ ಪುನೀತರಾದರು.

ಈ ಕಾರ್ಯಕ್ರಮದಲ್ಲಿ ಪುರಸಭೆ ಮಾಜಿ ಅಧ್ಯಕ್ಷ ಅಯೋಧ್ಯೆ ವೆಂಕಟೇಶ್ ಗಂಗಾಮತ ಸಮಾಜದ ಅಧ್ಯಕ್ಷ ಎಲೆಗಾರ ನಾಗರಾಜ್, ಅಂಬಿಗರ ಚೌಡಯ್ಯ ಸಂಘದ ಅಧ್ಯಕ್ಷ ಜೆ.ಪ್ರಕಾಶ್, ಮುಖಂಡರಾದ ದೊಡ್ಡ ವೆಂಕಟೇಶ್, ನಡವಿ ಮಲ್ಲಿಕಾರ್ಜುನ, ಕರೇಕಲ್ ಮನೋಹರ್, ಬಿ.ಸಿದ್ದಪ್ಪ, ಗಂಗಣ್ಣ, ವೀರಪ್ಪ, ಬಿ.ಮಲ್ಲಿ, ಅಯೋಧಿ ರಮೇಶ್ ಸೇರಿದಂತೆ ಮುಖಂಡರು, ಯುವಕರು, ಮಹಿಳೆಯರು, ಮಕ್ಕಳು ಪಾಲ್ಗೊಂಡಿದ್ದರು. ನಂತರ ಅನ್ನ ಸಂತಾರ್ಪಣೆ ಜರುಗಿತು.

## ಸಿಂಧನೂರಿನಲ್ಲಿ ‘ನೇತ್ರದಾನ ಪಾಕ್ಷಿಕ’ ಜಾಗೃತಿ ಕಾರ್ಯಕ್ರಮ – ನೇತ್ರದಾನದಿಂದ ಇಬ್ಬರ ಬಾಳಿಗೆ ಬೆಳಕು : ಗೀತಾ ಹಿರೇಮಠ

ನೈಜ್ಯ ದೆಸೆ ನ್ಯೂಸ್

ಸಿಂಧನೂರು: ಜಿಲ್ಲಾಡಳಿತ ಜಿಲ್ಲಾ ಪಂಚಾಯತ್ ರಾಜ್ ರಾಯಚೂರ್ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಧಿಕಾರಿಗಳ ಕಾರ್ಯಾಲಯ ಸಿಂಧನೂರ್ ನಗರ ಪ್ರಾಥಮಿಕ ಆರೋಗ್ಯ ಕೇಂದ್ರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಿಂಧನೂರು ಇವರ ಸಂಕ್ರಾಶ್ರಯದಲ್ಲಿ ನಗರದ ಆದರ್ಶ ಕಾಲೋನಿಯ ಮೂರನೇ ಅಂಗನವಾಡಿ ಕೇಂದ್ರದಲ್ಲಿ ಸಾರ್ವತ್ರಿಕ ಮಕ್ಕಳ ಲಸಿಕಾ ಕರಣ ಸತ್ರದಲ್ಲಿ ನೇತ್ರದಾನ ಪಾಕ್ಷಿಕ ಕುರಿತು ಶ್ರೀಮತಿ ಗೀತಾ ತಾಲೂಕು ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿಗಳು ತಾಲೂಕ ಆರೋಗ್ಯ ಅಧಿಕಾರಿಗಳ ಕಾರ್ಯಾಲಯ ಸಿಂಧನೂರು ಮಾತನಾಡಿ UHND (ನಗರ ಆರೋಗ್ಯ ಮತ್ತು ಪೌಷ್ಠಿಕಾಂಶ ದಿನ) ಸಭೆಯಲ್ಲಿ ನೇತ್ರಾದನದ ಕುರಿತು ಚರ್ಚಿಸಲಾಯಿತು,



ನೇತ್ರದಾನ ಎಂದರೆ ಪ್ರತಿಯೊಬ್ಬರು ಮರಣ ಹೊಂದಿದ ನಂತರ ಅವರ ಕಣ್ಣುಗಳನ್ನು ಶಸ್ತ್ರ ಚಿಕಿತ್ಸೆಯ ಮೂಲಕ ತೆಗೆದು ದೃಷ್ಟಿ ಹೀನರಿಗೆ ಅಳವಡಿಸುವ ಪ್ರಕ್ರಿಯೆಗೆ ನೇತ್ರದಾನ ಎನ್ನುತ್ತಾರೆ ಇದರಿಂದ ಕಣ್ಣಿನ ಕಾರ್ನಿಯ ಅಂ–ಧತ್ವದಿಂದ ಬಳಲುವ ಇಬ್ಬರು ವ್ಯಕ್ತಿಗಳಿಗೆ ಹೊಸ ದೃಷ್ಟಿ ಸಿಗುತ್ತದೆ ಯಾವುದೇ ವಯಸ್ಸಿನ ವ್ಯಕ್ತಿಗಳು ಮಕ್ಕಳಿಂದ ಹಿಡಿದು ವೃದ್ಧರವರೆಗೂ ಕಣ್ಣುಗಳನ್ನು ದಾನ ಮಾಡಬಹುದು ಕಣ್ಣುಗಳು ಮನುಷ್ಯನ ಜೀವನಕ್ಕೆ ಅತ್ಯಗತ್ಯವಾದ ಕಣ್ಣುಗಳು ಮಾನವನ ದೇಹದ ಮುಖ್ಯ ಸಂವೇದನಾ ದೃಷ್ಟಿ ಶಕ್ತಿಯನ್ನು ನೀಡುತ್ತದೆ ಮನುಷ್ಯನ ದೇಹದ ಅಂಗಗಳಲ್ಲಿ ಕಣ್ಣು ಕೂಡ ಒಂದಾಗಿದೆ ಅದು ನೋಡುವ ದೃಷ್ಟಿಯನ್ನು ಹೊಂದಿದೆ ಯಾವುದೇ ರಕ್ತದ ಗುಂಪಿನವರು ದಾನ ಮಾಡಬಹುದು ಮರಣದ ನಂತರ ಅವರ ಕಣ್ಣುಗಳನ್ನು ದಾನ ಮಾಡಿ ಇನ್ನೊಬ್ಬರ ಜೀವನಕ್ಕೆ ಬೆಳಕಾಗುವುದು ಮರಣದ ನಂತರ ಕಣ್ಣುಗಳನ್ನು ದಾನ ಮಾಡುವುದರಿಂದ ಕಾರ್ನಿಯಲ್ಲ ಅಂದಿತ್ವದಿಂದ ಬಳಲುತ್ತಿರುವವರು ಇಬ್ಬರು ವ್ಯಕ್ತಿಗಳಿಗೆ ದೃಷ್ಟಿ ಮರುಕಳಿಸಲು ಸಹಾಯವಾಗುತ್ತದೆ ನೇತ್ರದಾನವು ಅತ್ಯಂತ ಮಾನವೀಯ ಮತ್ತು ಶ್ರೇಷ್ಠವಾದ ದಾನವಾಗಿದೆ ದಾನ ಮಾಡಿದ ಕಣ್ಣುಗಳಿಂದ ಅಂದರೆ ಈ ಜಗತ್ತನ್ನು ನೋಡುವ ಅದೃಷ್ಟ ಸಿಗುತ್ತದೆ ಯಾರು ಕಣ್ಣುಗಳನ್ನು ದಾನ ಮಾಡಬಹುದು ವಯಸ್ಸು ಲಿಂಗ ಜಾತಿ ಅಥ–ವಾ ಧರ್ಮ ಯಾವುದೇ ಹಂಗಿಲ್ಲದೆ ಪ್ರತಿಯೊಬ್ಬರೂ ನೇತ್ರದಾನ ಮಾಡಬಹುದು ಕನ್ನಡಕ ಧರಿಸುವವರು ಹಾಗೂ ಮಧುಮೇಹ ಇರುವವರು ಕೂಡ ಕಣ್ಣುಗಳನ್ನು ದಾನ ಮಾಡಬಹುದು ಸಮಯದ ಮಿತಿ ವ್ಯಕ್ತಿ ಮೃತರಾದ ಆರು (6) ಗಂಟೆಯೊಳಗೆ ಕಣ್ಣುಗಳನ್ನು ಸಂಗ್ರಹಿಸಬೇಕು ಆದ್ದರಿಂದ ಸಾವಿನ ನಂತರ ಆದಷ್ಟು ಬೇಗ ಹತ್ತಿರದ ನೇತ್ರ ಬ್ಯಾಂಕಿಗೆ ಕರೆ ಮಾಡಬೇಕು ಒಂದು ಮಾಹಿತಿ ನೀಡಲಾಯಿತು. ಈ ಸಂದರ್ಭದಲ್ಲಿ ಕಮಲ ಕಊಅಔ, ಆಶಾ ಕಾರ್ಯಕರ್ತೆಯರಾದ ಗಂಗಮ್ಮ, ಕವಿತಾ, ಅಂಗನವಾಡಿ ಕಾರ್ಯಕರ್ತೆಯರಾದ ರೇಣುಕಾ, ಸಭಿಯ, ಗರ್ಭಿಣಿ ತಾಯಂದಿರು ಭಾಗವಹಿಸಿದ್ದರು.

# ಖಬರುಸ್ತಾನ್(ಸ್ಮಶಾನ) ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ : ಶಾಸಕ ಜೆ.ಎನ್.ಗಣೇಶ

ನೈಜ್ಯ ದೆಸೆ ನ್ಯೂಸ್

**ಬಳ್ಳಾರಿ / ಕಂಪ್ಲಿ : ತಾಲೂಕಿನ ನಂ.10 ಮುದ್ದಾಪುರ ಗ್ರಾಪಂಯ ಬೆಳಗೋಡ್‌ಹಾಳ್ ಗ್ರಾಮದ ಮುಸ್ಲಿಂ ಸಮಾಜದ ಖಬರುಸ್ತಾನ್(ಸ್ಮಶಾನ) ಸ್ಥಳಕ್ಕೆ ಶಾಸಕ ಜೆ.ಎನ್.ಗಣೇಶ್ ಭೇಟಿ ನೀಡಿ, ಇಲ್ಲಿನ ಸಮಸ್ಯೆಗೆ ಅತಿ ಶೀಘ್ರದಲ್ಲಿ ಮುಕ್ತಿ ನೀಡುವ ಭರವಸೆ ನೀಡಿದರು. ಇಲ್ಲಿನ ಸ್ಥಳಕ್ಕೆ ಭೇಟಿ ನೀಡಿದ ವೇಳೆ ಯುವ ಮುಖಂಡ ಮತ್ತು ಕಂಪ್ಲಿ ತಾಲೂಕು ಮಾನವ ಬಂದತ್ವ ಅಧ್ಯಕ್ಷ ಬಿ.ನಬೀಸಾಬ್ ಇವರು ಖಬರುಸ್ತಾನ್ ಸ್ಥಳಕ್ಕೆ ಹೋಗಿ ಬರಲು ಸಮರ್ಪಕವಾಗಿ ರಸ್ತೆ ಇಲ್ಲದಂತಾಗಿದೆ.**

ಕಿರಿದಾದ ರಸ್ತೆಯಲ್ಲಿ ಮೃತ ದೇಹವನ್ನು ತೆಗೆದುಕೊಂಡು ಹೋಗಿ ಅಂತ್ಯಕ್ರಿಯೆ ಮಾಡಲು ಸಮಸ್ಯೆಯಾಗುತ್ತಿದ್ದು, ಇದಕ್ಕೆ ಸೂಕ್ತ ಪರಿಹಾರ ಕಲ್ಪಿಸಬೇಕೆಂದು ಶಾಸಕ ಜೆ.ಎನ್.ಗಣೇಶ್ ಅವರಲ್ಲಿ ಮನವಿಯೊಂದಿಗೆ ಅಳಲು ತೋಡಿಕೊಳ್ಳುವ ಜೊತೆಗೆ ಕಿರಿದಾದ ಮಣ್ಣಿನ ದಾರಿ, ಎರಡೂ ಬದಿ ಹಸಿರು ಭತ್ತದ ಗದ್ದೆ, ಆ ದಾರಿಯ ಕೊನೆಯಲ್ಲಿ ಅರ್ಧ ಕಟ್ಟಿದ ಕಾಂಪೌಂಡ್ ಗೋಡೆಯ ಖಬರುಸ್ತಾನ್‌ನಲ್ಲಿರುವ ಸಮಸ್ಯೆಯ ಗಂಭೀರತೆಯನ್ನು ತಿಳಿಸಿದರು. ಶಾಸಕ ಜೆ.ಎನ್.ಗಣೇಶ್ ಮಾತನಾಡಿ, ಮನುಷ್ಯನ ಅಂತಿಮ ಶವ ಯಾತ್ರೆಯನ್ನು ಗೌರವದಿಂದ ಕಳುಹಿಸಿಕೊಡುವುದು ನಮ್ಮ ಕರ್ತವ್ಯವಾಗಿದೆ.

ಇದು ಭಾವನಾತ್ಮಕ ಮತ್ತು ಮಾನವೀಯದ ಪ್ರತೀಕವಾಗಿದೆ. ಇಲ್ಲಿನ ಖಬರುಸ್ತಾನ್(ಸ್ಮಶಾನ)ವನ್ನು ಅಭಿವೃದ್ಧಿಗೊಳಿಸುವ ಜೊತೆಗೆ ಕಿರಿದಾದ ರಸ್ತೆಯನ್ನು ಅಗಲೀಕರಣಗೊಳಿಸಿ, ಗುಣಮಟ್ಟದ ರಸ್ತೆ ಮಾಡುವ ಮೂಲಕ ಶವ ಯಾತ್ರೆಗೆ ಅನುಕೂಲ ಮಾಡಿಕೊಡಲಾಗುವುದು. ಮುಸ್ಲಿಂ ಸಮಾಜದ ಏಳಿಗೆ ಜೊತೆಗೆ ಪ್ರತಿಯೊಂದು ಹಂತದಲ್ಲಿ ಸೌಲಭ್ಯಗಳನ್ನು ಕಲ್ಪಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದರು.



ಈ ಸಂದರ್ಭದಲ್ಲಿ ಎಪಿಎಂಸಿ ಅಧ್ಯಕ್ಷ ಎನ್. ಹಬೀಬ್ ರೆಹಮಾನ್, ಮುಖಂಡರಾದ ಪೇಂಟ–ರ್ ಮಸ್ತಾನ್, ಸಿ.ಆರ್.ಹನುಮಂತ, ಕೆ.ಷಣ್ಮುಕಪ್ಪ, ಜಾಫರ್, ವರದಿ ಶಬ್ಬೀರ್, ಹೊನ್ನೂರವಲಿ, ಗೂಡುಸಾಬ್, ರಾಜಾಭಕ್ಷಿ, ಪೀರಸಾಬ್, ಲೋಕರಾಜ, ಶರಣಗೌಡ, ಖಾಜಾ ಹುಸೇನ್, ನೂರ್‌ಬಾಷಾ ಸೇರಿದಂತೆ ಇತರರು ಇದ್ದರು.

## ಹೆಚ್‌ಐವಿ ಸೋಂಕಿಗೆ ಒಮ್ಮೆ ಒಳಗಾದಲ್ಲಿ ಜೀವನಪೂರ್ತಿ ಹೆಚ್‌ಐವಿ ಸೋಂಕೀತರಾಗಿಯೇ ಇರಬೇಕಾದ ಹಿನ್ನಲೆ, ಇಂದೆ ರೋಗದ ವಿರುದ್ದ ಜಾಗೃತರಾಗೋಣ.

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಆಕಸ್ಮಿಕವೋ, ಅಥವಾ ಗೊತ್ತಿಲ್ಲದೆಯೋ ಅಥವಾ ಗೊತ್ತಿದ್ದು, ಹೆಚ್‌ಐವಿ ಸೋಂಕಿಗೆ ಒಮ್ಮೆ ಒಳಗಾದಲ್ಲಿ ಜೀವನಪೂರ್ತಿ ಹೆಚ್‌ಐವಿ ಸೋಂಕಿತರಾಗಿಯೇ ಬದುಕಬೇಕಾದ ಅನಿವಾರ್ಯತೆಗಳನ್ನು ದೂರಮಾಡಿಕೊಳ್ಳಲು ಇಂದೆ ನಾವೆಲ್ಲರೂ ಪ್ರತಿಜ್ಞೆ ತೊಡೋಣ, ಇದಕ್ಕಾಗಿ ಪ್ರತಿಯೊಬ್ಬರಿಗೂ ಜಾಗೃತಿ ನೋಡೋಣವೆಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ ನಂದಿತಾ ಎಮ್ ಎನ್ ತಿಳಿಸಿದರು.**

ಕರ್ನಾಟಕ ರಾಜ್ಯ ಏಡ್ಸ್ ಪ್ರಿವೇನ್‌ಷನ್ ಸೊಸೈಟಿ ಬೆಂಗಳೂರು, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಏಡ್ಸ್ ನಿಯಂತ್ರಣ ಘಟಕದ ಸಹಯೋಗದಲ್ಲಿ ಬೀದಿ ನಾಟಕ ಪ್ರದರ್ಶನ ಮೂಲಕ "ಹೆಚ್‌ಐವಿ, ಏಡ್ಸ್ ಕುರಿತು ತೀವ್ರಗೊಳಿಸಿದ ಐಇಸಿ, ಪ್ರಚಾರಾಂದೋಲನವನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಾರ್ಯಾಲಯದ ಆವರಣದಲ್ಲಿ ಚಾಲನೆ ನೀಡಿ ಮಾತನಾಡುತ್ತಾ, ಇಂದಿನಿಂದ 06 ದಿನಗಳವರೆಗೆ ಆಯ್ದ ಗ್ರಾಮಗಳಲ್ಲಿ ತಂಡವು, ಹೆಚ್ಚು ಜನಸೇರುವ ಸ್ಥಳದಲ್ಲಿ ಪ್ರದರ್ಶನ ನೀಡಲಿದ್ದಾರೆ. ಅಲ್ಲದೆ ಜಾಗತಿಕವಾಗಿ ಹೆಚ್‌ಐವಿ




ಪ್ರಕರಣಗಳು ಪುನಃ ಹೆಚ್ಚು ವರದಿಯಾಗುತ್ತಿವೆ.

ಅಪರಿಚಿತರೊಂದಿಗೆ ಅಸುರಕ್ಷಿತ ಲೈಂಗಿಕ ಸಂಪರ್ಕ, ಒಬ್ಬರಿಗಿಂತ ಹೆಚ್ಚು ಜನ ಒಂದೇ ಸಿರೆಂಜ್ ನೀಡ್ಲ್ ಬಳಸುವುದು, ಪರೀಕ್ಷೆಗೆ ಒಳಪಡಿಸದೆ ಇರುವ ರಕ್ತವನ್ನು ಇನ್ನೊಬ್ಬರಿಗೆ ಪೂರಣ ಮಾಡಿಸುವುದು, ಹೆಚ್‌ಐವಿ ಸೊಂಕೀತ ಗರ್ಭಿಣಿಯು ಯಾವುದೇ ಮುಂಜಾಗ್ರತಾ ವಹಿಸದೆ ಇದ್ದಲ್ಲಿ ಜನನದ ನಂತರ ಮಗುವಿಗೂ ಸಹ ಸೋಂಕಿನೊಂದಿಗೆ ಜನನವಾಗುವ ಸಾಧ್ಯತೆ ಇದೆ. ಅದರಲ್ಲೂ ಮುಖ್ಯವಾಗಿ ಒಮ್ಮೆ ಸೋಂಕಿಗೆ ಒಳಗಾದಲ್ಲಿ ಜೀವನ ಪೂರ್ತಿ ಸೋಂಕಿತರಾಗಿಯೇ ಬದುಕ ಬೇಕಾಗುವ ಗಂಭೀರತೆಯನ್ನು ಹದಿಯರೆಯದವರಿಗೆ ಹೆಚ್ಚು ಜಾಗೃತಿ ನೀಡಿ ಅವರ ಆರೋಗ್ಯ ಕಾಪಾಡುವ ಹೊಣೆಗಾರಿಕೆ ಪ್ರತಿಯೊಬ್ಬರ ಮೇಲೆ ಇದೆ. ಪ್ರಸ್ತುತ ಎಲ್ಲ ಅರೋಗ್ಯ ಕೇಂದ್ರಗಳಲ್ಲಿ ಪರೀಕ್ಷೆ ಮಾಡುವ ವ್ಯವಸ್ಥೆ ಕಲ್ಪಿಸಲಾಗಿದೆ.

ಸ್ವಯಂ ಪರೀಕ್ಷೆಗಾಗಿ ಪ್ರಶ್ನೋತ್ತರ ಮೊಬಲೈಸೇಶನ್ ಫಾರ್ ಏಡ್ಸ್ ಸುರಕ್ಷಾ ಅಭಿಯಾನದಡಿ ಕ್ಯೂಆರ್ ಕೋಡ್‌ನ್ನು ಮೊಬೈಲ್ ಮೂಲಕ ಸ್ಕ್ಯಾನ್ ಮಾಡಿ ಪ್ರಶ್ನೋತ್ತರದೊಂದಿಗೆ ಯಾರಿಗಾದರೂ ಸಂಶಯ ಬಂದಲ್ಲಿ ಸ್ವಯಂವಾಗಿ ಹತ್ತಿರದ ಆರೋಗ್ಯ ಕೇಂದ್ರಗಳಲ್ಲಿ ಪರೀಕ್ಷೆ ಮಾಡಿಸಬಹುದಾಗಿದ್ದು, ಖಚಿತವಾದಲ್ಲಿ ಎಆರ್‌ಟಿ ಕೇಂದ್ರಗಳಲ್ಲಿ ಉಚಿತ ಚಿಕಿತ್ಸೆಯು ಜಿಲ್ಲೆಯಾದ್ಯಂತ ಲಭ್ಯವಿದ್ದು ಎಲ್ಲ ಮಾಹಿತಿಯನ್ನು ಗೌಪ್ಯವಾಗಿಡಲಾಗುವುದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಜಿಲ್ಲಾ ಏಡ್ಸ್ ನಿಯಂತ್ರಣಾಧಿಕಾರಿ ಡಾ ಯಶೋಧಾ, ಜಿಲ್ಲಾ ಕುಟುಂಬ ಕಲ್ಯಾಣ ಕಾರ್ಯಕ್ರಮ ಅನುಷ್ಟಾನಾಧಿಕಾರಿ ಡಾ ಶಿವಕುಮಾರ್, ಜಿಲ್ಲಾ ಡಿವಿಬಿಡಿಸಿಪಿ ಡಾ ಚಂದ್ರಶೇಖರಯ್ಯ ಸ್ವಾಮಿ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ, ಉಪ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಬಸ್ಸಯ್ಯ, ಡ್ಯಾಪ್ಕೋ ಮೇಲ್ವಿಚಾರಕ ಮಲ್ಲಯ್ಯ ಮಠಪತಿ, ಡಿಪಿಎಮ್ ನವೀನ್ ಕುಮಾರ್, ಸಿಪಿಓ ಬಸವರಾಜಪ್ಪಗೌಡ, ಬಿಹೆಚ್‌ಇಓ ನಾಗರಾಜ್ ಜಗತಾಪ್, ಹೆಚ್‌ಐಓ ಸುರೇಶ್ ಬಂಡಾರಿ, ಅಮರೇಶ ಗಡ್ಡಿ, ಸುರೇಶ್, ರಾಜಶೇಖರ್ ಸೇರಿದಂತೆ ಆಶಾ ಕಾರ್ಯಕರ್ತೆಯರು, ಶ್ರೀ ಆದಿಶಕ್ತಿ ಸಂಸ್ಕೃತಿ–ಕ ಬೀದಿ ನಾಟಕ ತಂಡ ಗೋವನಕೊಪ್ಪದ ಕಲಾವಿದರು ಹಾಗೂ ಇತರರು ಹಾಜರಿದ್ದರು.

## ಪ್ರಿಯಾಂಕ್ ಖರ್ಗೆ ವಿರುದ್ಧ ಜೆಡಿಎಸ್ ಪ್ರತಿಭಟನೆ

ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ಸಚಿವ ಪ್ರಿಯಾಂಕ್ ಖರ್ಗೆ ವಿರುದ್ಧ ಜೆಡಿ–ಎಸ್ ಮುಖಂಡರು ಹಾಗೂ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು. ಜೆಡಿಎಸ್ ಕಾರ್ಯಕರ್ತರನ್ನು ಟಾರ್ಗೆಟ್ ಮಾಡಲಾಗುತ್ತಿದೆ ಮತ್ತು ಅವರ ವಿರುದ್ಧ ಪ್ರಕರಣಗಳನ್ನು ದಾಖಲಿಸಲಾಗುತ್ತಿದೆ ಎಂದು ಆರೋಪಿಸಿ ಪ್ರತಿಭಟನೆ ನಡೆಸಲಾಯಿತು.**




ಮಾಜಿ ಶಾಸಕ ಅಖಂಡ ಶ್ರೀನಿವಾಸ ಮೂರ್ತಿ ಹಾಗೂ ಜೆಡಿಎಸ್ ಮುಖಂಡ ರಮೇಶ್ ಗೌಡ ನೇತೃತ್ವದಲ್ಲಿ ಕೆಪಿಸಿಸಿ ಕಚೇರಿ ಬಳಿ ಪ್ರತಿಭಟನೆ ನಡೆಯಿತು. ಜೆಡಿಎಸ್ ಕಾರ್ಯಕರ್ತರ ವಿರುದ್ಧ ನಡೆಯುತ್ತಿರುವ ಕ್ರಮಗಳನ್ನು ಖಂಡಿಸಿ ಕಾಂಗ್ರೆಸ್ ಕಚೇ–ರಿಗೆ ಮುತ್ತಿಗೆ ಹಾಕಲು ಪ್ರತಿಭಟನಾಕಾರರು ಮುಂದಾದರು. ಪ್ರತಿಭಟನಾಕಾರರು ಕೆಪಿಸಿಸಿ ಕಚೇರಿಗೆ ಮುತ್ತಿಗೆ ಹಾಕುವ ಮುನ್ನವೇ ಪೊಲೀಸರು ಅವರನ್ನು ವಶಕ್ಕೆ ಪಡೆದರು. ಅಖಂಡ ಶ್ರೀನಿವಾಸ ಮೂರ್ತಿ, ರಮೇಶ್ ಗೌಡ ಸೇರಿದಂತೆ 50ಕ್ಕೂ ಹೆಚ್ಚು ಜೆಡಿಎಸ್ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಈ ವೇಳೆ ಸ್ಥಳದಲ್ಲಿ ಕೆಲಕಾಲ ಬಿಗುವಿನ ವಾತಾವರಣ ನಿರ್ಮಾಣವಾಗಿದ್ದು, ಯಾವುದೇ ಅಹಿತಕರ ಘಟನೆ ನಡೆಯದಂತೆ ಪೊಲೀಸರು ಬಿಗಿ ಭದ್ರತೆ ಕೈಗೊಂಡಿದ್ದರು. ತಿಹಾರ್ ಜೈಲಿಗೆ ಸೋನಿಯಾ, ರಾಹುಲ್ ಹೋಗಿದ್ದೇಕೆ? ಬೆಂಗಳೂರು, ಸೆ.1– ಕಾಂಗ್ರೆಸ್ ಪಕ್ಷದ ಅಧಿನಾಯಕಿ ಸೋನಿಯಾ ಗಾಂಧಿ ಅವರು ಮತ್ತು ಅವರ ಪುತ್ರ ಹಾಗೂ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರಿಬ್ಬರೂ ಯಾರನ್ನು ಭೇಟಿಯಾಗಲು ತಿಹಾರ್ ಜೈಲಿಗೆ ಹೋಗಿದ್ದರು? ಎಂದು ಜೆಡಿಎಸ್ ಪ್ರಶ್ನಿಸಿದೆ.

# ಬಿಜೆಪಿ ಕೋಟೆಗೆ ಡಿಕೆ ಟೀಮ್ ಎಂಟ್ರಿ..

# ಸೆ. 18ರಂದು ಕರಾವಳಿಯಲ್ಲಿ ಸಚಿವ ಸಂಪುಟ ಸಭೆ

ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ಮುಖ್ಯಮಂತ್ರಿಯಾದ ಬಳಿಕ ಡಿ.ಕೆ.ಶಿವಕುಮಾರ್ ಆಡಳಿತವನ್ನು ಜನರ ಬಳಿಗೆ ತೆಗೆದುಕೊಂಡು ಹೋಗಲು ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳುತ್ತಿದ್ದು, ಮತ್ತೂ ಒಂದು ಹೆಜ್ಜೆ ಮುಂದೆ ಹೋಗಿ ಇದೇ ಮೊದಲ ಬಾರಿಗೆ ಕರಾವಳಿ ಪ್ರದೇಶಗಳಲ್ಲಿ ಸಚಿವ ಸಂಪುಟ ಸಭೆ ನಡೆಸಲು ಮುಂದಾಗಿದ್ದಾರೆ. ಸೆ. 18ರಂದು ಮಂಗಳೂರಿನಲ್ಲಿ ಸಚಿವ ಸಂಪುಟ ಸಭೆ ನಡೆಸಲು ನಿರ್ಧರಿಸಲಾಗಿದೆ.**

ಈ ಮೊದಲು ಬೆಳಗಾವಿ, ಕಲಬುರಗಿ ಸೇರಿದಂತೆ ವಿವಿಧ ಜಿಲ್ಲೆಗಳಲ್ಲಿ ಇತ್ತೀಚೆಗೆ ಸಚಿವ ಸಂಪುಟ ಸಭೆಗಳು ನಡೆದಿದ್ದವು. ಸಾಮಾನ್ಯವಾಗಿ ರಾಜಧಾನಿ ಬೆಂಗಳೂರಿನಲ್ಲೇ ಸಚಿವ ಸಂಪುಟ ಸಭೆಗಳು ನಡೆಯುವುದು ವಾಡಿಕೆ. ಪ್ರಾದೇಶಿಕವಾದ ಬೇಡಿಕೆಗಳು ಹಾಗೂ ಮಹತ್ವದ ಸಂದರ್ಭಗಳಲ್ಲಿ ಬೆಂಗಳೂರಿನ ಹೊರ ಭಾಗದಲ್ಲಿ ಸಚಿವ ಸಂಪುಟ ಸಭೆಗಳು ನಡೆಯಲಿವೆ. ಈಗ ಕರಾವಳಿ ಜಿಲ್ಲೆಗಳಲ್ಲಿ ಇದೇ ಮೊಟ್ಟ ಮೊದಲ ಬಾರಿಗೆ ಸಂಪುಟ ಸಭೆ ನಡೆಸಲು ಚರ್ಚಿಸಲಾಗಿದೆ. ಮಂಗಳೂರಿನಲ್ಲಿ ಸಚಿವ ಸಂಪುಟ ಸಭೆ ನಡೆಸುವುದಾಗಿ ಕೆಲ ದಿನಗಳ ಹಿಂದೆ ಮುಖ್ಯಮಂತ್ರಿಯವರು ಸುಳಿವು ನೀಡಿದ್ದರು. ಈಗ ದಿನಾಂಕ ನಿಗದಿಯಾಗಿದೆ.

**ಅಭಿವೃದ್ಧಿಯ ಚರ್ಚೆ:** ಸಚಿವ ಸಂಪುಟ ಸಭೆಯಲ್ಲಿ ಕರಾವಳಿ ಜಿಲ್ಲೆಗಳ ಅಭಿವೃದ್ಧಿ ಪ್ರಸ್ತಾವನೆಗಳಿಗೆ ವಿಶೇಷ ಆದ–



್ಯತೆ ನೀಡುವ ಸಾಧ್ಯತೆ ಇದೆ. ಸಭೆಗೆ ಮುನ್ನ ಕರಾವಳಿ ಕರ್ನಾಟಕಕ್ಕೆ ಸಂಬಂಧಿಸಿದ ಪ್ರಮುಖ ಯೋಜನೆಗಳು ಮತ್ತು ಸಮಸ್ಯೆಗಳ ಕುರಿತು ಪ್ರಸ್ತಾವನೆಗಳನ್ನು ಸಿದ್ಧಪಡಿಸಿ, ಅಗತ್ಯ ಸಚಿವ ಸಂಪುಟ ಟಿಪ್ಪಣಿಗಳನ್ನು ಸಲ್ಲಿಸುವಂತೆ ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್ ಅವರು ಎಲ್ಲ ಇಲಾಖೆಗಳ ಮುಖ್ಯ ಕಾರ್ಯದರ್ಶಿಗಳು, ಪ್ರಧಾನ ಕಾರ್ಯದರ್ಶಿಗಳು ಹಾಗೂ ಕಾರ್ಯದರ್ಶಿಗಳಿಗೆ ಸೂಚನೆ ನೀಡಿದ್ದಾರೆ.

ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಗಳ ಅಭಿವೃದ್ಧಿ ವಿಚಾರಗಳು ಸಭೆಯಲ್ಲಿ ಪ್ರಮುಖವಾಗಿ ಚರ್ಚೆಗೆ ಬರುವ ನಿರೀಕ್ಷೆಯಿದೆ. ವಿಶೇಷವಾಗಿ ಕರಾವಳಿ ಪ್ರವಾಸೋದ್ಯಮ, ಮೂಲಸೌಕರ್ಯ, ರಸ್ತೆ–ಸಂಪರ್ಕ, ಬಂದರು, ಕೈಗಾರಿಕೆ ಸೇರಿದಂತೆ ಹಲವು ಕ್ಷೇತ್ರಗಳ ಪ್ರಸ್ತಾವನೆಗಳಿಗೆ ಒತ್ತು ಸಿಗುವ ಸಾಧ್ಯತೆ ಇದೆ. ಇದರ ಜೊತೆಗೆ ಮಲ್ನಾಡ್–ಕರಾವಳಿ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ, ಮರಳು ಮತ್ತು ಲ್ಯಾಟರೈಟ್ ಗಣಿಗಾರಿಕೆಗೆ ಸಮಗ್ರ ನೀತಿ ಹಾಗೂ ತುಳು ಭಾಷೆಗೆ ಅಧಿಕೃತ ಭಾಷೆಯ ಸ್ಥಾನಮಾನ ಸೇರಿದಂತೆ ಹಲವು ದೀರ್ಘಕಾಲದ ಬೇಡಿಕೆಗಳ ಬಗ್ಗೆಯೂ ನಿರೀಕ್ಷೆ ಮೂಡಿದೆ.

ಮಂಗಳೂರಿನಲ್ಲಿ ರಾಜ್ಯ ಸಚಿವ ಸಂಪುಟ ಸಭೆ ನಡೆಯುತ್ತಿರುವುದು ಇದೇ ಮೊದಲ ಬಾರಿಗೆ ಎನ್ನಲಾಗಿದ್ದು, ಕರಾವಳಿ ಭಾಗದ ಅಭಿವೃದ್ಧಿಗೆ ಸರ್ಕಾರದ ಆಡಳಿತಾತಕ ಗಮನವನ್ನು ಹೆಚ್ಚಿಸುವ ಮಹತ್ವದ ಹೆಜ್ಜೆ ಎಂದು ನಿರೀಕ್ಷಿಸಲಾಗಿದೆ.

**ರಾಜಕೀಯ ಲೆಕ್ಕಾಚಾರ:** ಮಲೆನಾಡು ಮತ್ತು ಕರಾವಳಿ ಕೋಮು ಸೂಕ್ಷ್ಮ ಪ್ರದೇಶವಾಗಿದ್ದು, ಬಂಡವಾಳ ಹೂಡಿಕೆಗೆ ಉದ್ಯಮಿಗಳು ಹಿಂದೇಟು ಹಾಕುವುದು ಸಾಮಾನ್ಯವಾಗಿದೆ. ಪ್ರವಾಸೋದ್ಯಮ ಶಿಕ್ಷಣ ಸೇರಿದಂತೆ ಹಲವು ವಿಚಾರಗಳಲ್ಲಿ ಕರಾವಳಿ ಮುಂಚೂಣಿಯ ಜಿಲ್ಲೆಗಳಾಗಿದ್ದರೂ ನಿರೀಕ್ಷಿತ ಪ್ರಮಾಣದಲ್ಲಿ ಅಭಿವೃದ್ಧಿ ಸಾಧ್ಯವಾಗಿಲ್ಲ. ಐಟಿ ಪಾರ್ಕ್ ಸ್ಥಾಪನೆಗೆ ಹಲವು ವರ್ಷಗಳ ಹಿಂದೆಯೇ ಘೋಷಣೆಯಾಗಿದೆ. ಆದರೆ ಇಲ್ಲಿಯವರೆಗೂ ಅಧಿಕೃತವಾಗಿ ಅದು ಸಾಧ್ಯವಾಗಿಲ್ಲ. ಕಾಂಗ್ರೆಸ್‌ಗೆ ಹಳೇ ಮೈಸೂರು ಭಾಗ ಒಂದಿಷ್ಟು ಬಲವಾಗಿದೆ. ಜೆಡಿಎಸ್‌ಗೆ ಪೈಪೋಟಿಯೊಂದಿಗೆ ತನ್ನ ನಿಗದಿತ ಸ್ಥಾನಗಳನ್ನು ಕಾಂಗ್ರೆಸ್ ಕಾಯ್ದಿರಿಸಿಕೊಂಡಿದೆ. ಉತ್ತರ ಕರ್ನಾಟಕ ಭಾಗದಲ್ಲಿ ಬಿಜೆಪಿಯೊಂದಿಗಿನ ಪೈಪೋಟಿಯ ನಡುವೆಯೂ ಕನಿಷ್ಠ ಸ್ಥಾನಗಳನ್ನು ಉಳಿಸಿಕೊಂಡಿದೆ. ಆದರೆ ಕರಾವಳಿ ಮಲೆನಾಡು ಜಿಲ್ಲೆಯಲ್ಲಿ ಬಿಜೆಪಿ ಎದುರು ಕಾಂಗ್ರೆಸ್ ಬಲ ಕುಗ್ಗಿದೆ. ಉಡುಪಿಯ 5ಕ್ಕೆ 5 ಕ್ಷೇತ್ರಗಳಲ್ಲೂ ಬಿಜೆಪಿಯ ಅಭ್ಯರ್ಥಿಗಳೇ ಗೆದ್ದಿದ್ದಾರೆ.

ಶಿವಮೊಗ್ಗದ 7 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಮೂರು ಕಡೆ ಗೆದ್ದಿದೆ. ಜೆಡಿಎಸ್–1, ಬಿಜೆಪಿ ಮೂರು ಸ್ಥಾನ ಗೆದ್ದಿದೆ. ಚಿಕ್ಕಮಗಳೂ–ರಿನ 5ಕ್ಕೆ 5 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಶಾಸಕ–ರಿದ್ದಾರೆ. ದಕ್ಷಿಣ ಕನ್ನಡದ 8 ಕ್ಷೇತ್ರಗಳಲ್ಲಿ 6 ಕಡೆ ಬಿಜೆಪಿ ಗೆದ್ದಿದ್ದು, ಎರಡರಲ್ಲಿ ಮಾತ್ರ ಕಾಂಗ್ರೆಸ್ ಶಾಸಕರಿದ್ದಾರೆ. ಉತ್ತರ ಕನ್ನಡದ 6 ಕ್ಷೇತ್ರಗಳಲ್ಲಿ ಎರಡರಲ್ಲಿ ಕಾಂಗ್ರೆಸ್ ನಾಲ್ಕರಲ್ಲಿ ಬಿಜೆಪಿ ಶಾಸಕರು ಆಯ್ಕೆಯಾಗಿದ್ದಾರೆ. 2028ರ ಚುನಾವಣೆಯಲ್ಲಿ ಕಾಂಗ್ರೆಸ್ ಮರಳಿ ಅಧಿಕಾರ ಹಿಡಿಯಲು ಹವಣಿಸುತ್ತಿದ್ದು, ಇದಕ್ಕಾಗಿ ಡಿ.ಕೆ.ಶಿವಕುಮಾರ್ ಕರಾವಳಿ ಹಾಗೂ ಮಲೆನಾಡು ಭಾಗದ ಜಿಲ್ಲೆಗಳ ಮೇಲೂ ಕಣ್ಣಿಟ್ಟಿದ್ದಾರೆ. ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಮೂಲತಃ ಕರಾವಳಿಯವರು. ಹೀಗಾಗಿ ಆ ಪ್ರದೇಶವನ್ನು ಹೆಚ್ಚು ಬಲಗೊಳಿಸುವ ನಿಟ್ಟಿನಲ್ಲಿ ನೀಲ ನಕ್ಷೆಗಳು ಸಿದ್ಧಗೊಳ್ಳುತ್ತಿವೆ. ಈ ಕಾರಣಕ್ಕಾಗಿ ಮೊದಲ ಬಾರಿಗೆ ಕರಾವಳಿ ಜಿಲ್ಲೆಯಲ್ಲಿ ಸಚಿವ ಸಂಪುಟ ಸಭೆ ನಡೆಸುವ ತಯಾರಿಗಳಾಗಿವೆ.

ದಕ್ಷಿಣ ಕನ್ನಡದ ಜಿಲ್ಲಾಧಿಕಾರಿ ಕಚೇರಿ, ಜಿಲ್ಲಾ ಪಂಚಾಯತ್ ಕಚೇರಿ ಎನ್‌ಐ–ಟಿಕೆ, ಮಂಗಳೂರು ವಿಶ್ವ ವಿದ್ಯಾಲಯ ಸೇ–ರಿದಂತೆ ಕೆಲವು ಸ್ಥಳಗಳನ್ನು ಸಚಿವ ಸಂಪುಟ ಸಭೆಗಾಗಿ ಗುರುತಿಸಲಾಗಿದೆ.

## ವಚನ ದರ್ಶನ

ಎನಗಿಂತ ಕಿರಿಯರಿಲ್ಲ, ಶಿವಭಕ್ತರಿಗಿಂತ ಹಿರಿಯರಿಲ್ಲಾ- ನಿಮ್ಮ ಪಾದ ಸಾಕ್ಷಿ, ಎನ್ನ ಮನ ಸಾಕ್ಷಿ ಕೂಡಲಸಂಗಮದೇವಾ, ಎನಗಿದೇ ದಿಬ್ಯ

ವಿಶ್ವಗುರು ಬಸವಣ್ಣನವರು ಮತ್ತು ಇತರ ಶರಣರಿಂದ ರೂಪುಗೊಂಡ ವಚನ ಸಾಹಿತ್ಯದ ಮುಖ್ಯ ಉದ್ದೇಶ ಕೇವಲ ಕಾವ್ಯ ರಚನೆಯಲ್ಲ. ಅದೊಂದು ಸಾಮಾಜಿಕ ಸುಧಾರಣೆ, ಸಮಾನತೆ, ಅಧ್ಯಾತ್ಮ ಸಾಧನೆ ಹಾಗೂ ಜನಸಾಮಾನ್ಯರಿಗೆ ಸರಳ ಭಾಷೆಯಲ್ಲಿ ಜ್ಞಾನ ತಲುಪಿಸುವ ಬಹುಮುಖಿ ಚಳುವಳಿಯಾಗಿದೆ.

12ನೇ ಶತಮಾನದ ಶರಣರಾದ ವಿಶ್ವಗುರು ಬಸವಣ್ಣನವರ ಪ್ರಸಿದ್ಧ ವಚನವಾಗಿದೆ.


ನಾನೆಂಬ ಅಹಂ, ದೊಡ್ಡವನು ಎಂಬ ಗರ್ವ ನನಗಿಲ್ಲ. ಎಲ್ಲರಿಗಿಂತ ನಾನೇ ಕಿರಿದಾದವನು ವಿನೀತ ಎಂದು ಬಸವಣ್ಣನವರು ಭಾವಿಸಿದ್ದಾರೆ. ಶಿವನನ್ನು ನಂಬಿ ಪೂಜಿಸುವ ಭಕ್ತರೇ ಈ ಜಗತ್ತಿನಲ್ಲಿ ಅತ್ಯಂತ ಹಿರಿಯರು ಮತ್ತು ಶ್ರೇಷ್ಠರು.
ದೇವರ ಪಾದವೇ ಮತ್ತು ನನ್ನ ಮನಸ್ಸೇ ನನಗೆ ಸಾಕ್ಷಿ. ಭಕ್ತರಲ್ಲಿ ಕಾಣುವ ಈ ವಿನಮ್ರತೆಯೇ ನನಗೆ ದಿವ್ಯವಾದದ್ದು ಎಂದು ಬಸವಣ್ಣನವರು ಸಾರಿದ್ದಾರೆ.
ವಚನಗಳು ಮನುಕುಲದ ದಾರಿದೀಪ ಶರಣು ಶರಣಾರ್ಥಿಗಳು.

ಪಂಪಯ್ಯಸ್ವಾಮಿ ಸಾಲಿಮಠ
ಅಂತರಗಂಗಿ-ಸಿಂಧನೂರು. 998094144

## ಮಹಾರಾಷ್ಟ್ರದಲ್ಲಿ 2 ಕೋಟಿ ಮತದಾರರು ಡಿಲೀಟ್

ನೈಜ್ಯ ದೆಸೆ ನ್ಯೂಸ್

**ಮುಂಬೈ: ಮಹಾರಾಷ್ಟ್ರದ 288 ವಿಧಾನಸಭಾ ಕ್ಷೇತ್ರಗಳ ನೂತನ ಕರಡು ಮತದಾರರ ಪಟ್ಟಿಯನ್ನು ಸೋಮವಾರ ಪ್ರಕಟಿಸಲಾಗಿದ್ದು, ರಾಜ್ಯದ ಚುನಾವಣಾ ರಾಜಕಾರಣದಲ್ಲಿ ಭಾರಿ ಸಂಚಲನ ಮೂಡಿಸಿದೆ. ವಿಶೇಷ ತೀವ್ರ ಪರಿಷ್ಕರಣೆ ಪ್ರಕ್ರಿಯೆಯ ಬಳಿಕ ಹೊರಬಂದಿರುವ ಈ ಕರಡು ಪಟ್ಟಿಯಲ್ಲಿ ಬರೋಬ್ಬರಿ 2,06,88,487 ಮತದಾರರ ಹೆಸರುಗಳನ್ನು ಕೈಬಿಡಲಾಗಿದೆ. ಇದು ಹಿಂದಿನ ಒಟ್ಟು ಮತದಾರರ ಸಂಖ್ಯೆಯ ಶೇಕಡಾ 21.14 ರಷ್ಟು ಎಂದು ತಿಳಿದುಬಂದಿದೆ.**



7,71,65,562 (ಹಿಂದಿನ 9,78,54,049 ರಲ್ಲಿ ಶೇ. 78.86 ರಷ್ಟು ಮಾತ್ರ). ಲಿಂಗವಾರು ವಿಂಗಡಣೆ: 3,95,89,905 ಪುರುಷರು, 3,75,72,570 ಮಹಿಳೆಯರು ಹಾಗೂ 3,087 ತೃತೀಯ ಲಿಂಗಿಗಳು ಪಟ್ಟಿಯಲ್ಲಿದ್ದಾರೆ. ಪುಣೆ (28.6 ಲಕ್ಷ), ಥಾಣೆ (28.5 ಲಕ್ಷ), ಮುಂಬೈ ಸಬರ್ಬನ್ (26.5 ಲಕ್ಷ) ಮತ್ತು ನಾಗ್ಪುರ (14.43 ಲಕ್ಷ). ಮನೆಗಳಲ್ಲಿ ಗೈರು ಹಾಜರಿರುವುದು, ವಿಳಾಸ ಬದಲಾಯಿಸಿರುವುದು, ಮರಣಹೊಂದಿರುವುದು, ನಕಲಿ ಅಥವಾ ಬಹು ನೋಂದಣಿಗಳು ಹಾಗೂ ಗಣತಿ ನಮೂನೆಗಳನ್ನು ಸಂಗ್ರಹಿಸಲು ಅಥವಾ ಭರ್ತಿ ಮಾಡಿ ಸಲ್ಲಿಸಲು ಸಾಧ್ಯವಾಗದೆ ಇರುವುದು ಈ ದೊಡ್ಡ ಮಟ್ಟದ ಕಡಿತಕ್ಕೆ ಕಾರಣವೆಂದು ಚುನಾವಣಾ ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ. ಕರಡು ಪಟ್ಟಿಯಿಂದ ಹೆಸರು ಕಳೆದುಕೊಂಡಿರುವ ಸಾರ್ವಜನಿಕರು ಆಗಸ್ಟ್ 31 ರಿಂದ ಸೆಪ್ಟೆಂಬರ್ 30 ರವರೆಗೆ ತಮ ಹಕ್ಕು ಹಾಗೂ ಆಕ್ಷೇಪಣೆಗಳನ್ನು ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ನಮೂನೆ 6: ಹೊಸ ಸೇರ್ಪಡೆಗೆ ನಮೂನೆ 7: ಆಕ್ಷೇಪಣೆಗಳಿಗೆ ನಮೂನೆ 8: ಹೆಸರು, ವಿಳಾಸ ಅಥವಾ ವಯಸ್ಸಿನ ತಿದ್ದುಪಡಿಗೆ- ಎಲ್ಲಾ ಪ್ರಕ್ರಿಯೆಗಳು ಮುಕ್ತಾಯಗೊಂಡು ನವೆಂಬರ್ 4 ರಂದು ಅಂತಿಮ ಮತದಾರರ ಪಟ್ಟಿ ಅಧಿಕೃತವಾಗಿ ಬಿಡುಗಡೆಯಾಗಲಿದೆ.

# ವರುಣಾ ವ್ಯಾಪ್ತಿಯಲ್ಲಿ ಬರ ಪರಿಶೀಲನೆ ಅನ್ನದಾತರಿಂದ ಮಾಹಿತಿ ಪಡೆದ ಡಿಸಿಎಂ ಡಾ ಜಿ ಪರಮೇಶ್ವರ್, ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾಕ್ಟರ್ ಎಸ್ ಯತಿಂದ್ರ ಸಿದ್ರಾಮಯ್ಯ

ನೈಜ್ಯ ದೆಸೆ ನ್ಯೂಸ್

**ತಾಂಡವಪುರ: ವರುಣಾ ವ್ಯಾಪ್ತಿಯಲ್ಲಿ ಬರ ಪರಿಶೀಲನೆ ಅನ್ನದಾತರಿಂದ ಮಾಹಿತಿ ಪಡೆದ ಡಿಸಿಎಂ ಡಾ ಜಿ ಪರಮೇಶ್ವರ್, ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾಕ್ಟರ್ ಎಸ್ ಯತಿಂದ್ರ ಸಿದ್ರಾಮಯ್ಯ ರವರು ಬರೆ ಪೀಡಿತ ಪ್ರದೇಶದ ರೈತರ ಜಮೀನು ಒಳಗೆ ಭೇಟಿ ನೀಡಿ ಪರಿಶೀಲಿಸಿ ರೈತರಿಂದ ಮಾಹಿತಿ ಪಡೆದುಕೊಂಡರು ಕಾನೂನಿನಡಿಯಲ್ಲಿ ಬರ ಪೀಡಿತ ಪ್ರದೇಶ ಎಂದು ಘೋಷಣೆ ಮಾಡಿದರೆ ಪರಿಹಾರ ಸಿಗುವುದಿಲ್ಲ.**

ಕೇಂದ್ರ ಸರ್ಕಾರದ ನಿಯಮಗಳಡಿಯಲ್ಲೇ ಮಾಡಬೇಕು. ಹಾಗಾಗಿ 101 ತಾಲೂಕುಗಳನ್ನು ಬರಪೀಡಿತ ಪ್ರದೇಶ ಎಂದು ಘೋಷಿಸಿದ್ದೇವೆ. ಇನ್ನೊಂದು ವಾರ ಬಿಟ್ಟು ಪರಿಶೀಲನೆ ನಡೆಸಿ, ಅರ್ಹ ಪ್ರದೇಶಗಳನ್ನು ಬರಪೀಡಿತ ಎಂದು ಘೋಷಿಸಲಾಗುವುದು ಎಂದು ಉಪ ಮುಖ್ಯಮಂತ್ರಿಗಳು ಹಾಗೂ ಕಂದಾಯ ಸಚಿವರಾದ ಡಾ.ಜಿ.ಪರಮೇಶ್ವರ ಅವರು ತಿಳಿಸಿದರು. ಮಂಗಳವಾರ ವರುಣಾ ವಿಧಾನಸಭಾ ಕ್ಷೇತ್ರ (ಹೋಬಳಿ) ವ್ಯಾಪ್ತಿಯ ದೇವಲಾಪುರ, ಮೋಸಂಮಾನಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಸೇರಿದ ಆಯರಹಳ್ಳಿ.. ಮತ್ತು ರಾಯಣ್ಣ ಹುಂಡಿ ಗ್ರಾಮದಲ್ಲಿನ ಬರ ಪೀಡಿತ ಪ್ರದೇಶಗಳನ್ನು ವೀಕ್ಷಿಸಿ, ಅಗತ್ಯ ಮಾಹಿತಿ ಪಡೆದು ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದರು. ಬರದಿಂದ ಸಂಕಷ್ಟಕ್ಕೆ ಸಿಲುಕಿರುವ ರೈತರಿಗೆ ಸರ್ಕಾರ ಅಗತ್ಯ ನೆರವು ಒದಗಿಸಲಿದೆ ಎಂದು ಅವರು ಭರವಸೆ ನೀಡಿದರು. ಬೆಳೆ ನಷ್ಟದ ಕುರಿತು ಸಮಗ್ರ ವರದಿ ಸಿದ್ಧಪಡಿಸಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗುವುದು.

ಎನ್‌ಡಿಆರ್‌ಎಫ್ ಅಡಿಯಲ್ಲಿ ಹೆಚ್ಚಿನ ಪರಿಹಾರ ದೊರೆಯುವಂತೆ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಲಾಗುವುದು ಎಂದು ಅವರು ತಿಳಿಸಿದರು. ಪ್ರಸ್ತುತ ಇರುವ ಎನ್‌ಡಿಆರ್‌ಎಫ್ ನಿಯಮಗಳನ್ನು ಸಡಿಲಗೊಳಿಸಿ, ಬರದಿಂದ ತೀವ್ರವಾಗಿ ಬಾಧಿತವಾಗಿರುವ ಹೆಚ್ಚಿನ ತಾಲೂಕುಗಳಿಗೂ ಪರಿಹಾರ ಒದಗಿಸುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಲಾಗುವುದು ಎಂದರು. ಇನ್ನೂ ಬರ ಪರಿಸ್ಥಿತಿಯಿಂದ ರೈತರು ಆರ್ಥಿಕ ಸಂಕಷ್ಟದಲ್ಲಿರುವ ಸಂದರ್ಭದಲ್ಲಿ ಸಾಲ ವಸೂಲಾತಿ ಹೆಸರಿನಲ್ಲಿ ಮೈಕ್ರೋಫೈನಾನ್ಸ್ ಸಂಸ್ಥೆಗಳು ರೈತ-



ರಿಗೆ ಯಾವುದೇ ರೀತಿಯ ಕಿರುಕುಳ ನೀಡಬಾರದು. ಸರ್ಕಾರ ರೂಪಿಸಿರುವ ನಿಯಮಗಳನ್ನು ಉಲ್ಲಂಘಿ ಸುವ ಸಂಸ್ಥೆಗಳ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಉಪ ಮುಖ್ಯಮಂತ್ರಿಗಳು ಎಚ್ಚರಿಕೆ ನೀಡಿದರು.

ರೈತರ ಸಮಸ್ಯೆಗಳನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದ್ದು, ಬರ ಪರಿಸ್ಥಿತಿಯನ್ನು ನಿರಂತರವಾಗಿ ಪರಿಶೀಲಿಸಿ ಅಗತ್ಯ ಪರಿಹಾರ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಅವರು ಹೇಳಿದರು. ಈಗಾಗಲೇ ನಾನು ಮತ್ತು ಮುಖ್ಯಮಂತ್ರಿಗಳು ಕೇಂದ್ರಕ್ಕೆ ಪತ್ರವನ್ನು ಬರೆದಿದ್ದೇವೆ. ಬರಪೀಡಿತ ಘೋಷಣೆಗೆ ಇರುವ ನಿಯಮಗಳನ್ನು ಸಡಿಲಿಸುವಂತೆ ಕೋರಿದ್ದೇವೆ. ನಿಯಮ ಸಡಿಲಿಸಿದರೆ ಹೆಚ್ಚು ತಾಲೂಕುಗಳನ್ನು ಬರಪೀಡಿತ ಪ್ರದೇಶ ಎಂದು ಘೋಷಿ ಸಬಹುದು. ಆದ-ರೆ ಕೇಂದ್ರದಿಂದ ಈವರೆಗೂ ಯಾವುದೇ ಪ್ರತಿಕ್ರಿಯೆ ಬಂದಿಲ್ಲ. ಹಾಗಾಗಿ ವಿಸ್ತೃತ ಮೆಮೊರಾಂಡಮ್ ಅನ್ನು ಸದ್ಯದಲ್ಲೇ ಸಲ್ಲಿಸುತ್ತೇವೆ. ಅವರ ತಂಡ ಇಲ್ಲಿಗೆ ಬಂದು ಪರಿಶೀಲನೆ ನಡೆಸಿದ ಬಳಿಕ ಹಣ ಬಿಡುಗಡೆಯಾಗುತ್ತದೆ ಎಂದು ಡಿಸಿಎಂ ವಿವರಿಸಿದರು.

ಮುಖ್ಯಮಂತ್ರಿಗಳು ಇಂದು ಗದಗ ಜಿಲ್ಲೆಗೆ ಬರಪೀಡಿತ ಪ್ರದೇಶದ ವೀಕ್ಷಣೆಗೆ ತೆರಳಿದ್ದಾರೆ. ನಾನು ಇಂದು ಮತ್ತು ನಾಳೆ ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಗಳ ಬರ ವೀಕ್ಷಣೆ ಮಾಡುತ್ತೇನೆ. ಅಂತಿಮವಾಗಿ ನಮ್ಮ ಸರ್ಕಾರ ಚರ್ಚಿಸಿ ರೈತರ ಸಮಸ್ಯೆ ಪರಿಹಾರಕ್ಕೆ ತೀರ್ಮಾನ ತೆಗೆದುಕೊಳ್ಳುತ್ತದೆ ಎಂದು ವಿವರಿಸಿದರು. ಯತೀಂದ್ರ ಭವಿಷ್ಯದ ನಾಯಕ: ಇದೇ ವೇಳೆ ನಗರಾಭಿವೃದ್ಧಿ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ಅವರ ಕಾರ್ಯವೈಖರಿಗೆ ಮೆಚ್ಚುಗೆ ವ್ಯಕ್ತಪಡಿಸಿದ ಡಿಸಿಎಂ ಪರಮೇಶ್ವರ್ ಅವರು, ಮುಂದಿನ ಭವಿಷ್ಯದ ನಾಯಕರಾಗಿ ಯತೀಂದ್ರ ಹೊರಹೊಮ್ಮಲಿದ್ದಾರೆ ಎಂಬ ಆತ್ಮ ವಿಶ್ವಾಸವನ್ನು ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ. ನಗರಾಭಿವೃದ್ಧಿ ಸಚಿವ ಹಾಗೂ ಜಿಲ್ಲಾ ಉಸ್ತುವಾರಿ ಮಂತ್ರಿ. ಡಾ. ಎಸ್ ಯತೀಂದ್ರ ಸಿದ್ದರಾಮಯ್ಯ, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ. ಹಾಡ್ಯ ರಂಗಸ್ವಾಮಿ, ರಾಯಣ್ಣ ಹುಂಡಿ ರವಿ, ಮಾದೇವಣ್ಣ, ಕೀಳನಪುರ ಗ್ರಾಮ ಪಂಚಾಯತಿ ಅಧ್ಯಕ್ಷ ನಂಜುಂಡಸ್ವಾಮಿ, ಎಪಿಎಂಸಿ ಮಾಜಿ ಅಧ್ಯಕ್ಷ ಬಸವರಾಜು, ಭುಗುತಗಳ್ಳಿ ಮಣಿ, ಜ್ವರಪ್ಪ, ಬಾಬು, ಮಂಜುಳಾ, ತಾಲೂಕು ಪಂಚಾಯತಿ ಸದಸ್ಯ ಮುದ್ದರಾಮೇಗೌಡ, ಗಂಗನ ತಿಮ್ಮಯ್ಯ, ಹೆಬ್ಬರಾಜು, ಸುರೇಶ್ ಬಾಬು, ಸೋಮಸುಂದರ್, ಶಿವಣ್ಣ ಇನ್ನಿತರರು ಉಪಸ್ಥಿತರಿದ್ದರು. ಈ ವೇಳೆ ವರುಣಾ ಕ್ಷೇತ್ರದ ಎಲ್ಲಾ ಗ್ರಾಮಗಳ ಮುಖಂಡರಿಂದ ಉಪಮುಖ್ಯಮಂತ್ರಿ ಡಾ. ಪರಮೇಶ್ವರ್, ಜಿಲ್ಲಾ ಉಸ್ತುವಾರಿ ಮಂತ್ರಿ ಡಾ.ಯತೀಂದ್ರ ಸಿದ್ದರಾಮಯ್ಯ ಅವರಿಗೆ ಬೃಹತ್ ಸೇಬಿನ ಹಾರ ಹಾಗೂ ಹೂವಿನ ಹಾರ ಹಾಕಿ ಸ್ವಾಗತಿಸಿ ಬರಮಾಡಿ ಕೊಳ್ಳ ಲಾಯಿತು. ಬಳಿಕ ಉಪ ಮುಖ್ಯಮಂತ್ರಿಗಳು ಕಂದಾಯ ಸಚಿವರು ಆದ ಡಾಕ್ಟರ್ ಜಿ ಪರಮೇಶ್ವರ್ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾಕ್ಟರ್ ಎಸ್ ಯತೀಂದ್ರ ಸಿದ್ದರಾಮಯ್ಯ ರವರು ಮೈಸೂರು ಜಿಲ್ಲಾ ಪ್ರವಾಸದ ವೇಳೆ ವರುಣಾ ಕ್ಷೇತ್ರಕ್ಕೆ ಭೇಟಿ ನೀಡಿ, ಜನರನ್ನುದ್ದೇಶಿಸಿ ಮಾತನಾಡಿ ಮಾಹಿತಿ ಪಡೆದುಕೊಂಡಿದೆ ಇಂದು ರಾಜ್ಯದಲ್ಲಿ ಭೀಕರ ಬರಗಾಲ ಇದೆ. ಮಳೆಯ ಪ್ರಮಾಣ ಬಹಳ ಕಡಿಮೆಯಾಗಿ ಇಡೀ ರಾಜ್ಯದಲ್ಲಿ ಕುಡಿಯುವ ನೀರಿಗೆ ಸಮಸ್ಯೆ ಉಂಟಾಗಿದೆ. ನೂರಾರು ಹಳ್ಳಿಗಳಿಗೆ ಈಗಾಗಲೇ ಟ್ಯಾಂಕರ್ ಮೂಲಕ ನೀರು ಪೂರೈಸುತ್ತಿದ್ದೇವೆ. ಜಾನುವಾರುಗಳಿಗೆ ಕೇವಲ 30 ವಾರಗಳಿಗೆ ಸಾಕಾಗುವಷ್ಟು ಮೇವು ಇದೆ. ಇಂತಹ ಪರಿಸ್ಥಿತಿಯಲ್ಲಿ ನಾವು ರಾಜ್ಯದ ಪ್ರವಾಸ ಮಾಡಿ ಎಲ್ಲೆಲ್ಲಿ ಬರ ಇದೆ ಎಂದು ಪರಿಶೀಲನೆ ಮಾಡಿ, ಈಗಾಗಲೇ 101 ತಾಲ್ಲೂಕುಗಳನ್ನು ಬರಪೀಡಿತ ಪ್ರದೇಶ ಎಂದು ಘೋಷಣೆ ಮಾಡಿದ್ದೇವೆ. ಇನ್ನೊಂದು ವಾರದಲ್ಲಿ ಇನ್ನೂ 50 ತಾಲ್ಲೂಕುಗಳನ್ನು ಬರಪೀಡಿತ ಪ್ರದೇಶ ಎಂದು ಘೋಷಣೆ ಮಾಡಬಹುದು. ಇಂದು ಮೈಸೂರು ಜಿಲ್ಲೆಯಲ್ಲಿ ನಾಳೆ ಚಾಮರಾಜನಗರ ಜಿಲ್ಲೆಯಲ್ಲಿ ಪ್ರವಾಸ ಮಾಡುತ್ತಿದ್ದೇನೆ. ಬರಗಾಲ ಪೀಡಿತ ತಾಲ್ಲೂಕುಗಳಿಗೆ ಭೇಟಿ ನೀಡುತ್ತಿದ್ದೇನೆ. ಪರಿಸ್ಥಿತಿಯನ್ನು ಅವಲೋಕನ ಮಾಡಿ ಮುಂದಿನ ದಿನಗಳಲ್ಲಿ ಸಾಮಾನ್ಯ ಜನರ ಪರವಾಗಿ, ರೈತರ ಪರವಾಗಿ ತೀರ್ಮಾನಗಳನ್ನು ತೆಗೆದುಕೊಳ್ಳುತ್ತೇವೆ. ಹೀಗಾಗಿ ವಸ್ತುಸ್ಥಿತಿಯನ್ನು ನಾನೇ ಕಣ್ಣಾರೆ ನೋಡಬೇಕು ಎಂದು ಮಾಜಿ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಅವರ ಕ್ಷೇತ್ರಕ್ಕೆ ಬಂದಿದ್ದೇನೆ. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಇಂದು ಗದಗ ಜಿಲ್ಲೆಯಲ್ಲಿ ಪ್ರವಾಸ ಮಾಡುತ್ತಿದ್ದಾರೆ. ಈಗಾಗಲೇ ನಾನು ಮತ್ತು ಮುಖ್ಯಮಂತ್ರಿಗಳು ಕಲಬುರಗಿ, ಬೆಳಗಾವಿ, ಬೆಂಗಳೂರು ವಿಭಾಗಗಳಲ್ಲಿ ಬರ ಪರಿಶೀಲನೆಯನ್ನು ಮಾಡಿದ್ದೇವೆ. ಪರಿಸ್ಥಿತಿ ಬಹಳ ಗಂಭೀರವಾಗಿದೆ. ಇಂದು ಕೆ.ಆರ್ ಪೇಟೆ, ಕೆ. ಆರ್ ನಗರ ಮತ್ತು ಹುಣಸೂರಿಗೆ ಭೇಟಿ ನೀಡಿದ್ದೇನೆ. ಬರ ಪರಿಸ್ಥಿತಿಯ ಬಗ್ಗೆ ರೈತ-ರಿಂದ, ಅಧಿಕಾರಿಗಳಿಂದ ಮಾಹಿತಿ ಪಡೆದಿದ್ದೇನೆ. ಈ ಸಂದರ್ಭದಲ್ಲಿ ಸಚಿವರಾದ ಡಾ ಎಸ್. ಯತೀಂದ್ರ ಸಿದ್ದರಾಮಯ್ಯ, ಹಾಗೂ ಮೈಸೂರು ತಾಲೂಕು: ವರುಣ ವಿಧಾನಸಭಾ ಕ್ಷೇತ್ರದ ದೇವಲಾಪುರ ಗ್ರಾಮ. ರಾಯ ನ ಹುಂಡಿ ಗ್ರಾಮ. ಬರ ಪೀಡಿತ ಪ್ರದೇಶಗಳಿಗೆ. ಡಾಕ್ಟರ್ ಯತೀಂದ್ರ ಸಿದ್ರಾಮಯ್ಯನವರು ಎಪಿಎಂಸಿ ಮಾಜಿ ಅಧ್ಯಕ್ಷ ಬಂಡಿಪಾಳ್ಯ ಬಸವರಾಜು ಜಿಲ್ಲಾಧಿಕಾರಿ ಜಿ ಲಕ್ಷ್ಮಿಕಾಂತ್ ರೆಡ್ಡಿ ತಾಲೂಕು ದಾಂಡಾಧಿಕಾರಿ ಮಹೇಶ್ ಕುಮಾರ್ ಯೋಗೇಶ್ ಕುಮಾರ್ ಮೈಸೂರು ಜಿಲ್ಲಾ ಕಾಂಗ್ರೆಸ್ ಪಕ್ಷ ಪ್ರಧಾನ ಕಾರ್ಯದರ್ಶಿ ವಕೀಲರು ಹಾಗೂ ಎಮ್ ಸಿ ರೈತರು ಮುಖಂಡರುಗಳು ಹಾಜರಿದ್ದರು

### ಶ್ರೀ ಡಿ ದೇವರಾಜು ಅರಸು ಹಿಂದುಳಿದ ವರ್ಗಗಳ ಮೆಟ್ರಿಕ್ ಪೂರ್ವ ಬಾಲಕಿಯರ ವಸತಿ ನಿಲಯದಲ್ಲಿ ಮಕ್ಕಳ ಆರೋಗ್ಯ ತಪಾಷಣೆ

# ಡಾ. ಶ್ರುತಿ ಅವರಿಂದ ಆರೋಗ್ಯದ ಕುರಿತು ಮಾಹಿತಿ ಶಿಕ್ಷಣ ಸಂವಹನ

ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಡಾ. ಶ್ರುತಿ ಮಕ್ಕಳ ತಜ್ಞರು ತಾಯಿ ಮಕ್ಕಳ ಆಸ್ಪತ್ರೆ ಸಿಂಧನೂರು ಇವರು ನಗರದ ಶ್ರೀ ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಮೆಟ್ರಿಕ್ ಪೂರ್ವ ಬಾಲಕಿಯರ ವಸತಿ ನಿಲಯಕ್ಕೆ ಭೇಟಿ ನೀಡಿ ವಿದ್ಯಾರ್ಥಿನಿಯರ ಆರೋಗ್ಯ ತಪಾಸಣೆ ಮಾಡಿದರು ಚರ್ಮಕ್ಕೆ ಸಂಬಂಧಪಟ್ಟ ತುರುಕೆ,**

ಫಂಗಸ್, ಅಲರ್ಜಿಗಳು ಊಟದಲ್ಲಿ ವ್ಯತ್ಯಾಸ ಮೈ ಮೇಲೆ ಮಚ್ಚೆಗಳಿದ್ದರೆ ಕೆಮ್ಮು ನೆಗಡಿ ಜ್ವರ ರಕ್ತ ಹೀನತೆ ಬಗ್ಗೆ ತಪಾಸಣೆ ಮಾಡಿದರು ನಂತರ ಅಡುಗೆ ಸಹಾಯಕರಿಗೆ ಹಾಗೂ ತಯಾರಕ-ರಿಗೆ ಪ್ರತಿಯೊಬ್ಬರು ನಿಯಮಿತವಾಗಿ ತಲೆಗೆ ಕ್ಯಾಪ್ (ತಲೆಗವಚ ) ಎಪ್ರಾನ್ (ಮುಂಗವಚ) ಧ-ರಿಸಲು, ಉಗುರು ಸ್ವಚ್ಛವಾಗಿ ಇಟ್ಟುಕೊಳ್ಳಲು ನೀರಿನ ಸಂಪು, ನೀರು ಸಂಗ್ರಹಗಳ ಒಳಭಾಗದಲ್ಲಿ ನಿಯಮಾನುಸಾರ ಸ್ವಚ್ಛಗೊಳಿಸಲು ತಿಳಿಸಲಾಯಿತು.

ಜಿಲ್ಲಾಡಳಿತ ಜಿಲ್ಲಾ ಪಂಚಾಯತ್ ರಾಯಚೂರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ರಾಯಚೂರ್ ತಾಲೂಕು ಆರೋಗ್ಯ ಅಧಿಕಾರಿಗಳ ಕಾರ್ಯಾಲಯ ಸಿಂಧನೂರ ಹಾಗೂ ನಗರ ಪ್ರಾಥಮಿಕ ಆರೋಗ್ಯ ಕೇಂದ್ರ ರವರ ಅಡಿಯಲ್ಲಿ ವಸತಿ ನೀಲಯಕ್ಕೆ ಬೇಟಿ ನೀಡಿ, ಆಹಾರ ಪದಾರ್ಥಗಳ ದಾಸ್ತಾನು ಕೊಠಡಿಯಲ್ಲಿ ನೆಲದಲ್ಲಿ ಕಾಯಿಪಲ್ಲೆ ಹಾಕದಂತೆ, ದವಸ ಧಾನ್ಯಗಳ ಬಳಿ ಇಲಿ ಇತರೆ ಕೀಟಗಳು ನುಸುಳದಿರಲು ನಿಗಾವಹಿಸಲು ಅಡುಗೆ ಸಾಮಗ್ರಿಗಳ ಸ್ವಚ್ಛ ಮಾಡುವ, ಸ್ಥಳದಲ್ಲಿ ಸರಾಗವಾಗಿ ನೀರು ಹರಿದು ಹೋಗುವಂತೆ ನೋಡಿಕೊಳ್ಳಲು ಹೇಳಲಾಯಿತು.

ತದನಂತರ ಶ್ರೀಮತಿ ಗೀತಾ ಹಿರೇಮಠ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿಗಳು ತಾಲ್ಲೂಕು ಆರೋಗ್ಯ ಅಧಿಕಾರಿಗಳ ಕಚೇರಿ ಸಿಂಧನೂರ್ ಇವರು ಮಾತನಾಡಿದರು ಮಕ್ಕಳು ಮನೆಯಲ್ಲಾಗಲಿ, ವಸತಿ ನಿಲಯದಲ್ಲಾಗಲಿ ಕಲುಷಿತ ಆಹಾರದಿಂದ ಬರುವ ಕಾಯಿಲೆಗಳನ್ನು ತಡೆಯಲು ವೈಯಕ್ತಿಕ ಸ್ವಚ್ಛತೆಯ ಕಡೆ ಗಮನಹರಿಸಲು ಸುರಕ್ಷಿತ ನೀರು ಸೇವಿಸಲು, ಕೈಗಳನ್ನು ಸಾಬೂನು ಮತ್ತು



ನೀರಿನಿಂದ ತೊಳೆಯಲು ವಿನಂತಿಸಲಾಯಿತು.

ತರಕಾರಿಗಳನ್ನು ಶುದ್ಧ ನೀರಿನಲ್ಲಿ ತೊಳೆಯುವುದು, ಸಿದ್ದಪಡಿಸದ ಆಹಾರವನ್ನು ಪ್ರತ್ಯೇಕವಾಗಿಡುವುದು. ಕಾಳುಗಳನ್ನು ಗಾಳಿಯಾಡದ ಡಬ್ಬಗಳಲ್ಲಿ ಇಡುವುದು, ಅಡುಗೆಗೆ ಬಳಸುವ ಆಹಾರ ಪದಾರ್ಥಗಳ ಪ್ಯಾಕ್ ಗಳ ಮೇಲೆ ಬಳಸಬಹುದಾದ ಅವಧಿ ( ಎಕ್ಸ್ಪೈರಿ ) ಪರಿಶೀಲಿಸಬೇಕು. ಆಹಾರದ ಗುಣಮಟ್ಟ ಮತ್ತು ಪ್ರಮಾಣವನ್ನು ನೋಡಿ ಬಳಸಬೇಕು. ಅಡುಗೆ ಮನೆಗೆ ಗೋಡೆಗಳ ಮೇಲೆ ಹಲ್ಲಿಗಳಿರದಂತೆ ಜೇಡಗಳು ಇರದಂತೆ ನೀಗಾವಹಿಸಲು ತಿಳಿಸಲಾಯಿತು. ಈ ಸಂದರ್ಭದಲ್ಲಿ ಶಾಂತ ಕಊಅಔ, ಮಲ್ಲಪ್ಪ ಒಐಫ, ನಾಜಮುನಿಸಾ ವಸತಿ ನಿಲಯ ಮೇಲ್ವಿಚಾರಕರು, ಅಂಬಮ್ಮ ಮುಖ್ಯ ಅಡುಗೆ ಸಹಾಯಕರು, ಕಸ್ತೂರಿ ಆಶಾ ಕಾರ್ಯಕರ್ತೆ ಹಾಗೂ ಅಡುಗೆ ಸಹಾಯಕರು ತಯಾರಕರು ಉಪಸ್ಥಿತರಿದ್ದರು.

# ಸಂಕನೂರು ನವೋದಯ ಮಾದರಿ ಶಾಲೆ ಕಾಮಗಾರಿ ಅಪೂರ್ಣ: ಮಳೆ ಬಂದರೆ ಆವರಣದಲ್ಲಿ ನೀರು, ಕಟ್ಟಡಕ್ಕೆ ತೇವಾಂಶ ಗುತ್ತಿಗೆದಾರನ ನಿರ್ಲಕ್ಷ ಮುನ್ನವೇ ಗೋಡೆಗಳ ಬಣ್ಣ ಕಿತ್ತುಹೋಗುತ್ತಿರುವ ಆರೋಪ; ಕಾಮಗಾರಿ ಗುಣಮಟ್ಟದ ಬಗ್ಗೆ ಪಾಲಕರ ಆತಂಕ ತಾಂತ್ರಿಕ ಪರಿಶೀಲನೆಗೆ ಆಗ್ರಹ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ರಾಯಚೂರು ಸಮೀಪದ ಸಂಕನೂರು ಗ್ರಾಮದಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಆಂಗ್ಲ ಮಾಧ್ಯಮ ನವೋದಯ ಮಾದರಿ ಶಾಲೆಯ ನೂತನ ಕಟ್ಟಡಕ್ಕೆ ಸ್ಥಳಾಂತರಗೊಂಡು ತರಗತಿಗಳು ಆರಂಭವಾಗಿದ್ದರೂ, ಹಲವು ಕಾಮಗಾ-ರಿಗಳು ಇನ್ನೂ ಪೂರ್ಣಗೊಳ್ಳದಿರುವುದು ಹಾಗೂ ಮೂಲಸೌಕರ್ಯಗಳ ಕೊರತೆ ವಿದ್ಯಾರ್ಥಿಗಳು ಮತ್ತು ಪಾಲಕರಲ್ಲಿ ಆತಂಕ ಮೂಡಿಸಿದೆ.**


ಕರ್ನಾಟಕ ಹೌಸಿಂಗ್ ಬೋರ್ಡ್ ವತಿಯಿಂದ ನಿರ್ಮಿಸಲಾಗಿರುವ ಶಾಲಾ ಕಟ್ಟಡದ ಸುತ್ತಮುತ್ತ ಮಳೆ ಬಂದಾಗ ನೀರು ನಿಂತುಕೊಳ್ಳುತ್ತಿದ್ದು, ಕಟ್ಟಡದ ಕೆಲ ಭಾಗಗಳಲ್ಲಿ ತೇವಾಂಶ ಕಾಣಿಸಿಕೊಂಡಿದೆ. ಅಲ್ಲಲ್ಲಿ ಗೋಡೆಯ ಬಣ್ಣ ಕಿತ್ತುಹೋಗುತ್ತಿರುವುದು ಕಂಡುಬರುತ್ತಿದೆ ಎಂದು ಪಾಲಕರು ಆರೋಪಿಸಿದ್ದಾರೆ. ಕಟ್ಟಡದ ಸಂಪೂರ್ಣ ಕಾಮಗಾರಿ ಪೂರ್ಣಗೊಳ್ಳುವ ಮುನ್ನವೇ ಇಂತಹ ಸಮಸ್ಯೆಗಳು ಕಾಣಿಸಿಕೊಂಡಿರುವುದು ಕಾಮಗಾರಿಯ ಗುಣಮಟ್ಟದ ಕುರಿತು ಅನುಮಾನ ಮೂಡಿಸಿದೆ ಎಂದು ಅವರು ತಿಳಿಸಿದ್ದಾರೆ.

ರಾಜ್ಯ ಸರ್ಕಾರದ ವತಿಯಿಂದ ಟೆಂಡರ್ ಮೂಲಕ ಕೋಟ್ಯಂತರ ರೂಪಾಯಿ ವೆಚ್ಚದಲ್ಲಿ ಶಾಲಾ ಕಟ್ಟಡಗಳು ನಿರ್ಮಾಣವಾಗುತ್ತಿದ್ದು, ಸಾರ್ವಜನಿಕ ಹಣದಿಂದ ನಿರ್ಮಿಸಲಾಗುವ ಇಂತಹ ಕಟ್ಟಡಗಳ ಕಾಮಗಾರಿ ಗುಣಮಟ್ಟದ ಬಗ್ಗೆ ಹೆಚ್ಚಿನ ನಿಗಾ ವಹಿಸಬೇಕಾಗಿದೆ. ಸಂಕನೂರು ನವೋದಯ ಮಾದರಿ ಶಾಲೆಯ ಕಾಮಗಾ-ರಿಗೂ ಅಂದಾಜು ?15 ಕೋಟಿಯಿಂದ ?25 ಕೋಟಿವರೆಗೆ ವೆಚ್ಚವಾಗಿರುವುದಾಗಿ ಸ್ಥಳೀಯವಾಗಿ ಮಾಹಿತಿ ಕೇಳಿಬರುತ್ತಿದ್ದು, ಕಾಮಗಾರಿಯ ನಿಖರ ಅಂದಾಜು ಮೊತ್ತ ಹಾಗೂ ವೆಚ್ಚದ ವಿವರಗಳನ್ನು ಸಂಬಂಧಪಟ್ಟ ಇಲಾಖೆ ಸಾರ್ವಜನಿಕರಿಗೆ ಸ್ಪಷ್ಟಪಡಿಸಬೇಕು ಎಂಬ ಒತ್ತಾಯವೂ ಕೇಳಿಬಂದಿದೆ.

ಕಟ್ಟಡದ ಗುಣಮಟ್ಟ, ತೇವಾಂಶ ಹಾಗೂ ನಿರ್ಮಾಣದ ಸದೃಢತೆ ಕುರಿತು ಉನ್ನತ ಮಟ್ಟದ ತಾಂತ್ರಿಕ ತಂಡದಿಂದ ಸಮಗ್ರ ಪರಿಶೀಲನೆ ನಡೆಸಬೇಕು. ಕಾಮಗಾರಿಯಲ್ಲಿ ಲೋಪ ಕಂಡುಬಂದಲ್ಲಿ ಸಂಬಂಧಪಟ್ಟ ಗುತ್ತಿಗೆದಾರರು ಹಾಗೂ ಹೊಣೆಗಾರ ಅಧಿಕಾರಿಗಳ ವಿರುದ್ಧ ನಿಯಮಾನುಸಾರ ಕ್ರಮ ಕೈಗೊಳ್ಳಬೇಕು. ವಿದ್ಯಾರ್ಥಿಗಳ ಸುರಕ್ಷತೆಗೆ ಯಾವುದೇ ರೀತಿಯ ರಾಜಿ ಮಾಡಿಕೊಳ್ಳಬಾರದು ಎಂದು ಪಾಲಕರು ಒತ್ತಾಯಿಸಿದ್ದಾರೆ.

ಶಾಲಾ ಆವರಣದಲ್ಲಿ ಮಳೆನೀರು ನಿಲ್ಲದಂತೆ ಮಾಡುವ ಕಾಮಗಾರಿ ತಮ್ಮ ಕಾಮಗಾ-ರಿಯ ವ್ಯಾಪ್ತಿಯಲ್ಲಿ ಇಲ್ಲ. ಕೆಲವು ಕಾಮಗಾರಿಗಳು ತಮ್ಮ ವ್ಯಾಪ್ತಿಗೆ ಸೇರದಿರುವುದರಿಂದ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಲಾಗಿದ್ದು, ಬಾಕಿ ಉಳಿದಿರುವ ಕಾಮಗಾರಿಗಳನ್ನು ಆದ-ಷ್ಟು ಬೇಗ ಪೂರ್ಣಗೊಳಿಸಲಾಗುವುದು ಎಂದು ಅವರು ತಿಳಿಸಿದ್ದಾರೆ.

450ಕ್ಕೂ ಹೆಚ್ಚು ವಿದ್ಯಾರ್ಥಿಗಳ ವ್ಯಾಸಂಗ ಈ ಶೈಕ್ಷಣಿಕ ವರ್ಷದಿಂದ ನೂತನ ಕಟ್ಟಡದಲ್ಲಿ ತರಗತಿಗಳು ಆರಂಭಗೊಂಡಿದ್ದು, 6ನೇ ತರಗತಿಯಿಂದ ದ್ವಿತೀಯ ಪಿಯುಸಿವರೆಗೆ ಸುಮಾರು 450ಕ್ಕೂ ಹೆಚ್ಚು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ವಿದ್ಯಾರ್ಥಿಗಳಿಗೆ ಹಾಸ್ಟೆಲ್, ಅಡುಗೆಮನೆ ಹಾಗೂ ಊಟದ ವ್ಯವಸ್ಥೆ ಕಲ್ಪಿಸಲಾಗಿದ್ದರೂ, ಸ್ವಚ್ಛತೆ ಮತ್ತು ನಿರ್ವಹಣೆಗೆ ಅಗತ್ಯ ಸಿಬ್ಬಂದಿಯ ಕೊರತೆ ಇದೆ ಎಂದು ಪಾಲಕರು ತಿಳಿಸಿದ್ದಾರೆ. ಶಾಲೆಯಲ್ಲಿ ಕೇವಲ 6 ಮಂದಿ ಕಾಯಂ ಶಿಕ್ಷಕರು ಇದ್ದು, 12 ಮಂದಿ ಅತಿಥಿ ಶಿಕ್ಷಕರ ನೆರವಿನಿಂದ




ಬೋಧನಾ ಕಾರ್ಯ ನಡೆಯುತ್ತಿದೆ. ಜೊತೆಗೆ 10 ಮಂದಿ ಡಿ-ಗ್ರೂಪ್ ಸಿಬ್ಬಂದಿ ಹಾಗೂ ಒಬ್ಬ ವಾರ್ಡನ್ ಕಾರ್ಯನಿರ್ವಹಿಸುತ್ತಿದ್ದಾರೆ. ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಹೆಚ್ಚಿನ ಸಂಖ್ಯೆಯಲ್ಲಿ ಕಾಯಂ ಶಿಕ್ಷಕರನ್ನು ನೇಮಕ ಮಾಡಬೇಕು ಎಂಬುದು ಪಾಲಕರ ಪ್ರಮುಖ ಬೇಡಿಕೆಯಾಗಿದೆ.

ರಸ್ತೆ, ಆಟದ ಮೈದಾನ ಸೇ-ರಿದಂತೆ ಮೂಲಸೌಕರ್ಯಕ್ಕೆ ಆಗ್ರಹ ಸಂಕನೂರು ಗ್ರಾಮದ ಮುಖ್ಯರಸ್ತೆಯಿಂದ ಶಾಲೆಯವರೆಗೆ ಉತ್ತಮ ಗುಣಮಟ್ಟದ ಸಂಪರ್ಕ ರಸ್ತೆ ನಿರ್ಮಿಸಬೇಕು. ವಿದ್ಯಾರ್ಥಿಗಳಿಗಾಗಿ ಸೂಕ್ತ ಆಟದ ಮೈದಾನ ನಿರ್ಮಿಸಬೇಕು. ಶಾಲೆ ಹಾಗೂ ಹಾಸ್ಟೆಲ್‌ನಲ್ಲಿ ಅಗತ್ಯ ಮೂಲಸೌಕರ್ಯಗಳನ್ನು ತಕ್ಷಣ ಕಲ್ಪಿಸಬೇಕು ಎಂದು ಪಾಲಕರು ಆಗ್ರಹಿಸಿದ್ದಾರೆ.

ಹಾಸ್ಟೆಲ್‌ನ ಪ್ರತಿಯೊಂದು ಮಹಡಿಗೂ ಪ್ರತ್ಯೇಕ ಕುಡಿಯುವ ನೀರಿನ ಘಟಕ ಅಳವಡಿಸಬೇಕು. ವಿದ್ಯಾರ್ಥಿಗಳ ತುರ್ತು ಸಂಪರ್ಕಕ್ಕಾಗಿ 247 ದೂರವಾಣಿ ವ್ಯವಸ್ಥೆ ಕಲ್ಪಿಸಬೇಕು. ಕಿಟಕಿಗಳಿಗೆ ಗ್ಲಾಸ್ ಅಳವಡಿಸದಿರುವುದರಿಂದ ಸೊಳ್ಳೆಗಳ ಕಾಟ ಹೆಚ್ಚಾಗಿದ್ದು, ಸೊಳ್ಳೆಗಳಿಂದ ಹರಡುವ ಕಾಯಿಲೆಗಳ ಆತಂಕವೂ ಇದೆ. ಕೂಡಲೇ ಮುನ್ನೆಚ್ಚ-ರಿಕಾ ಕ್ರಮ ಕೈಗೊಳ್ಳಬೇಕು ಎಂದು ಪಾಲಕರಾದ ಹಾಜಿ ಅಲಿ ಮಸರಕಲ್ ಒತ್ತಾಯಿಸಿದ್ದಾರೆ.

ಮಳೆನೀರು ನಿಲ್ಲದಂತೆ ಶಾಶ್ವತ ಪರಿಹಾರಕ್ಕೆ ಆಗ್ರಹ ಇದೇ ಸಂದರ್ಭದಲ್ಲಿ ಮಾತನಾಡಿದ ಗ್ರಾಮ ಪಂಚಾಯತ್ ಸದಸ್ಯ ಖಾಜಾ ಹುಸೇನ್ ಬಿಚ್ಚಾಲಿ, "ಮಳೆನೀರು ನಿಲ್ಲುತ್ತಿರುವುದರಿಂದ ಕಟ್ಟಡ ತೇವಾಂಶದಿಂದ ಕೂಡಿದೆ. ಮುಂದಿನ ದಿನಗಳಲ್ಲಿ ಕಟ್ಟಡದಲ್ಲಿ ಬಿರುಕು ಕಾಣಿಸಿಕೊಳ್ಳುವ ಸಾಧ್ಯತೆಯ ಬಗ್ಗೆಯೂ ಆತಂಕವಿದೆ. ಕಾಮಗಾರಿ ಕಳಪೆ ಮಟ್ಟದ್ದಾಗಿದೆಯೇ ಎಂಬುದನ್ನು ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ತಾಂತ್ರಿಕವಾಗಿ ಪರಿಶೀಲಿಸಬೇಕು. ಮಳೆನೀರು ಕಟ್ಟಡದ ಸುತ್ತ ನಿಲ್ಲದಂತೆ ನೀರನ್ನು ಬೇರೆಡೆಗೆ ಹರಿಸುವ ಶಾಶ್ವತ ವ್ಯವಸ್ಥೆ ಮಾಡಬೇಕು. ವಿದ್ಯಾರ್ಥಿಗಳ ಸುರಕ್ಷತೆಗಾಗಿ ತಕ್ಷಣ ಅಗತ್ಯ ಕ್ರಮ ಕೈಗೊಳ್ಳಬೇಕು," ಎಂದು ಒತ್ತಾಯಿಸಿದರು.

ಜಿಲ್ಲಾಧಿಕಾರಿ, ಜಿಪಂ ಸಿಇಒ ಸ್ಥಳ ಪರಿಶೀಲನೆಗೆ ಮನವಿ ಶಾಲೆಯಲ್ಲಿ ವಿದ್ಯಾರ್ಥಿಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಬೇಕು. ಅಪೂರ್ಣ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಿ, ವಿದ್ಯಾರ್ಥಿಗಳಿಗೆ ಸುರಕ್ಷಿತ ಹಾಗೂ ಉತ್ತಮ ಶೈಕ್ಷಣಿಕ ವಾತಾವರಣ ಕಲ್ಪಿಸಬೇಕು ಎಂದು ಪಾಲಕರು ಮನವಿ ಮಾಡಿದ್ದಾರೆ. ಜಿಲ್ಲೆಯ ಜನಪ್ರತಿನಿಧಿಗಳು, ಸಂಸದರು ಹಾಗೂ ಸಂಬಂಧಪಟ್ಟ ಸಚಿವರು ಶಾಲೆಗೆ ಭೇಟಿ ನೀಡಿ ಸಮಸ್ಯೆಗಳನ್ನು ಪರಿಶೀಲಿಸದಿರುವುದಕ್ಕೂ ಪಾಲಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

### ಹಂತ ಹಂತವಾಗಿ ಕಾಮಗಾರಿ ಪೂರ್ಣಗೊಳಿಸಲಾಗುವುದು: ಇಂಜಿನಿಯರ್

**ಈ ಕುರಿತು ಇಂಜಿನಿಯರ್ ಸೈಯದ್ ತೌಫೀಕ್ ಮಾತನಾಡಿ, ಶಾಲಾ ಕಟ್ಟಡದ ಕಾಮಗಾರಿ ಮೂರು ಹಂತಗಳಲ್ಲಿ ನಡೆಯುತ್ತಿದ್ದು, ಮೊದಲ ಹಾಗೂ ಎರಡನೇ ಹಂತದ ಕೆಲವು ಕಾಮಗಾ-ರಿಗಳು ಪೂರ್ಣಗೊಳ್ಳಬೇಕಿವೆ. ಹಾಸ್ಟೆಲ್ ಕಟ್ಟಡದ ಕಾಮಗಾರಿಯೂ ಪ್ರಗತಿಯಲ್ಲಿದ್ದು, ಅದನ್ನು ಶೀಘ್ರ ಪೂರ್ಣಗೊಳಿಸಲಾಗುವುದು ಎಂದು ತಿಳಿಸಿದ್ದಾರ**

### ಕಾಮಗಾರಿ ಗುಣಮಟ್ಟದ ಬಗ್ಗೆ ಆತಂಕ

**ಈ ಸಂದರ್ಭದಲ್ಲಿಕಾರ್ಯದರ್ಶಿಗಳು ಜಿಲ್ಲಾ ಕಾಂಗ್ರೆಸ್ ಕಮಿಟಿ ಅಲ್ಪಸಂಖ್ಯಾತರ ವಿಭಾಗ ರಾಯಚೂರು ಮುಖಂಡರಾದ ಮುಜಾಹಿದ್ ಮರ್ಚೆಡ್ ಮಾತನಾಡಿ, "ಶಾಲಾ ಕಟ್ಟಡದ ಕಾಮಗಾರಿ ಗುಣಮಟ್ಟದ ಬಗ್ಗೆ ಅನುಮಾನ ಮೂಡಿದೆ. ಕಟ್ಟಡ ಈಗಾಗಲೇ ತೇವಾಂಶದಿಂದ ಕೂಡಿದ್ದು, ಮಳೆ ಬಂದಾಗ ಶಾಲೆಯ ಸುತ್ತಮುತ್ತ ನೀರು ನಿಲ್ಲುತ್ತಿದೆ. ಇದರಿಂದ ವಿದ್ಯಾರ್ಥಿಗಳು ಹಾಗೂ ಪಾಲಕರಲ್ಲಿ ಆತಂಕ ಸೃಷ್ಟಿಯಾಗಿದೆ. ಶಿಕ್ಷಕರ ವಸತಿ ಕಟ್ಟಡಗಳ ಕಾಮಗಾರಿಯನ್ನೂ ಶೀಘ್ರ ಪೂರ್ಣಗೊಳಿಸಿ ಬಳಕೆಗೆ ನೀಡಬೇಕು. ಅಪೂರ್ಣ ಕಾಮಗಾರಿಗಳನ್ನು ಕೂಡಲೇ ಪೂರ್ಣಗೊಳಿಸಿ ವಿದ್ಯಾರ್ಥಿಗಳಿಗೆ ಸುರಕ್ಷಿತ ಹಾಗೂ ಉತ್ತಮ ಶೈಕ್ಷಣಿಕ ವಾತಾವರಣ ಕಲ್ಪಿಸಬೇಕು," ಎಂದು ಸರ್ಕಾರವನ್ನು ಒತ್ತಾಯಿಸಿದರು.**

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101